بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْکَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಸಂಚಿಕೆ: 06

ಕನ್ನಡ **ಬದರ್** ವಾರ ಪತ್ರಿಕೆ

WEEKLY **BADAR** QADIAN KANNADA

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

20 ಫೆಬ್ರವರಿ 2020, 20 ತಬ್‌ಲೀಗ್ 1399 ಹಿಜರಿ ಶಮ್‌ಸಿ, 25 ಜಮಾದಿಉಸ್ಸಾನಿ 1441 ಹಿಜರಿ ಖಮರಿ.


### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمْرِهٖ وَاَمْرِهٖ.

### ಅಲ್ಲಾಹನ ಉಪದೇಶ

اَلَّذِيْنَ اسْتَجَابُوْا لِلّٰهِ وَالرَّسُوْلِ مِنْۢ بَعْدِ مَاۤ اَصَابَهُمُ الْقَرْحُ ۛؕ لِلَّذِيْنَ اَحْسَنُوْا مِنْهُمْ وَاتَّقَوْا اَجْرٌ عَظِيْمٌ ۚ (آل عمران:173)

*(ಆಲಿ ಇಮ್ರಾನ್ 173)*

ಅಂದರೆ: ತಮಗೆ ಘಾಸಿಯಾದ ನಂತರ (ಕೂಡ) ಅಲ್ಲಾಹನ ಮತ್ತು ಸಂದೇಶವಾಹಕನ ಕರೆಗೆ ಓಗೊಟ್ಟವರ ಪೈಕಿ ಸತ್ಕರ್ಮ ಮಾಡಿದವರಿಗೂ ದೇವಭಕ್ತರಿಗೂ ಮಹತ್ತಾದ ಪ್ರತಿಫಲವಿದೆ.

**ನೈತಿಕತೆ ಎಂದರೆ ಅಲ್ಲಾಹನ ಸಂತೃಪ್ತಿ ಬಯಸುವುದಾಗಿದೆ. ಅದಕ್ಕಾಗಿ ನಾವು ರಸೂಲುಲ್ಲಾಹ್(ಸ) ರವರ ಜೀವನ ಮಾದರಿಯಲ್ಲಿ ನಡೆಯುವುದು ಅವಶ್ಯಕವಾಗಿದೆ. ಇದು ನೈತಿಕತೆಯ ಬುನಾದಿಯಾಗಿದೆ. ಇದರಲ್ಲಿ ಎಡವಿದರೆ ಕಟ್ಟಡ ನಿರ್ಮಿಸುವುದು ಅಸಾಧ್ಯ. ನೀತಿ ಎಂಬುದು ಒಂದು ಇಟ್ಟಿಗೆಯನ್ನು ಇನ್ನೊಂದು ಇಟ್ಟಿಗೆಯ ಮೇಲೆ ಇಡುವುದಾಗಿದೆ. ಒಂದೇ ಒಂದು ಇಟ್ಟಿಗೆ ಡೊಂಕಾದರೆ ಇಡೀ ಗೋಡೆ ಡೊಂಕಾಗಿರುವುದು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಬೇಡುವುದು ಮಾನವನ ಗುಣ ಮತ್ತು ದಯಪಾಲಿಸುವುದು ಅಲ್ಲಾಹನ ಗುಣವಾಗಿದೆ.

ಬೇಡುವುದು ಮಾನವನ ಗುಣವಾಗಿದೆ ಮತ್ತು ದಯಪಾಲಿಸುವುದು ಅಲ್ಲಾಹನ ಗುಣವಾಗಿದೆ. ಇದನ್ನು ಯಾರು ಅರಿಯುವುದಿಲ್ಲವೋ, ಒಪ್ಪುವುದಿಲ್ಲವೋ ಅವನು ಸುಳ್ಳುಗಾರನಾಗಿದ್ದಾನೆ. ನಾನು ನನ್ನ ಭಾಷಣದಲ್ಲಿ ಮಗುವಿನ ಉದಾಹರಣೆ ನೀಡುವಿಕೆಯು ಪ್ರಾರ್ಥನೆ (ದುಆ) ತತ್ವವನ್ನು ನಿಚ್ಚಳಗೊಳಿಸುತ್ತದೆ. ರಹ್ಮಾನಿಯತ್ ಮತ್ತು ರಹೀಮಿಯತ್ (ದಯವಂತಿಕೆ ಮತ್ತು ಕರುಣೆ) ಪ್ರತ್ಯೇಕವಲ್ಲ. ಆದ್ದರಿಂದ ಒಂದನ್ನು ಬಿಟ್ಟು ಒಂದನ್ನು ಪಡೆಯಬಯಸುವುದಾದರೆ ಅದು ಲಭಿಸುವುದಿಲ್ಲ. ರಹ್ಮಾನಿಯತ್, ರಹೀಮಿಯತ್ ಮೂಲಕ ಅನುಗ್ರಹ ಪಡೆಯುವ ಶಕ್ತಿ ಪ್ರಧಾನ ಮಾಡುತ್ತದೆ. ಹೀಗೆ ಮಾಡದವನು ಕೃತಘ್ನನು. ಇಯಾಕ ನಅಬುದು ಅರ್ಥವೇ ಇದಾಗಿದೆ. "ನಾವು ನಿನ್ನನ್ನೇ ಆರಾಧಿಸುತ್ತೇವೆ. ನೀನು ದಯಪಾಲಿಸಿದ ಸಾಮಗ್ರಿಗಳ ಹಾಗೂ ದಯಪಾಲಿಸಿದ ಮಾರ್ಗಗಳ ಮೂಲಕ. ನೋಡಿ ಈ ನಾಲಿಗೆಯು ಜೊಲ್ಲು ರಸ ಮತ್ತು ಸ್ನಾಯುಗಳಿಂದ ಸೃಟಿಸಿರಲಿಲ್ಲವಾಗಿದ್ದರೆ ನಾವು ವಾಕ್‌ಶಕ್ತಿ ಹೊಂದುತ್ತಿರಲಿಲ್ಲ. ನಮ್ಮ ಹೃದಯಭಾವನೆಗಳನ್ನು ವ್ಯಕ್ತಪಡಿಸಬಲ್ಲ ನಾಲಿಗೆ ನಮಗೆ ಪ್ರಾರ್ಥನೆಗೋಸ್ಕರ ದಯಪಾಲಿಸಿದ್ದಾನೆ. ಹೀಗಿರುವಾಗ ನಾವು ಪ್ರಾರ್ಥನೆಗೋಸ್ಕರ ನಾಲಿಗೆಯನ್ನು ಉಪಯೋಗಿಸುವುದಿಲ್ಲ ಎಂದರೆ ಅದು ನಮ್ಮ ದೌರ್ಭಾಗ್ಯವಾಗಿರುವುದು. ಹಲವು ರೋಗಗಳಿವೆ. ಅವು ನಾಲಿಗೆಗೆ ತಗುಲಿದರೆ ನಾಲಿಗೆ ತನ್ನ ಕಾರ್ಯ ಬಿಟ್ಟುಬಿಡುತ್ತದೆ. ವಿಪರೀತವಾದರೆ ಮೂಕರಾಗಿ ಬಿಡುತ್ತವೆ. ಆದ್ದರಿಂದ ಅಲ್ಲಾಹನು ನಮಗೆ ನೀಡಿದ ಈ ನಾಲಿಗೆಯು ಎಂತಹ ಅನುಗ್ರಹವಾಗಿದೆ. ಹೀಗೆಯೇ ಕಿವಿಗಳ ಸೃಷ್ಟಿಯಲ್ಲಿ ಆತಂಕ ಬಂದುಬಿಟ್ಟರೆ ಕಿವುಡರಾಗುತ್ತೇವೆ. ಹಾಗೆಯೇ ಹೃದಯದ ಸ್ಥಿತಿಯಾಗಿದೆ. ಅದರಲ್ಲಿ ಆತ್ಮೀಯತೆ ಇಡಲಾಗಿದೆ. ಯೋಚಿಸುವ, ಚಿಂತಿಸುವ ಶಕ್ತಿಗಳನ್ನು ಇಡಲಾಗಿದೆ. ಅದಕ್ಕೆನಾದರೂ ರೋಗ ಬಂದು ಬಿಟ್ಟರೆ ಅವೆಲ್ಲ ನಿರರ್ಥಕವಾಗಿ ಬಿಡುತ್ತವೆ. ಹುಚ್ಚರನ್ನು ನೋಡಿ ಇವೆಲ್ಲ ಶಕ್ತಿಗಳಿಂದ ಹೇಗೆ ವಂಚಿತರಾಗಿರುತ್ತಾರೆ. ಆದ್ದರಿಂದ ಅಲ್ಲಾಹನು ದಯಪಾಲಿಸಿದ ಈ ಶಕ್ತಿಗಳ ಬಗ್ಗೆ ನಾವು ಕೃತಜ್ಞರಾಗ ಬೇಡವೇ? ಅಲ್ಲಾಹನು ನಮಗೆ ನೀಡಿದ ಈ ಶಕ್ತಿಗಳನ್ನು ಅವಗಣಿಸಿದರೆ ನಾವು ಕೃತಘ್ನರೇ ಸರಿ. ಆದ್ದರಿಂದ ನೆನಪಿಡಿರಿ. ಈ ಶಕ್ತಿ, ಸಾಮರ್ಥ್ಯಗಳನ್ನು ಉಪಯೋಗಿಸದೇ ದುಆ (ಪ್ರಾರ್ಥನೆ) ಮಾಡಿದರೆ ಏನೂ ಪ್ರಯೋಜನವಾಗದು. ಏಕೆಂದರೆ ನಾವು ಮೊದಲು ನೀಡಿದ ಪಾರಿತೋಷಕದಿಂದ ಏನು ಉಪಯೋಗ ಪಡೆಯಲಿಲ್ಲವಾದರೆ ಇನ್ನೊಂದರಿಂದ ಪ್ರಯೋಜನ ಪಡೆಯಲಿಕ್ಕೆ ಹೇಗೆ ಸಾಧ್ಯವಾದೀತು.

### ನೈಜ ಆತ್ಮದೃಷ್ಟಿ ಬೇಡಲು ಉಪದೇಶ

ಆದ್ದರಿಂದ ಇಯ್ಯಾಕ ನಅ್‌ಬುದು ಪ್ರಸ್ತುತ ಪಡಿಸುತ್ತದೆ. ಓ ರಬ್ಬುಲ್ ಆಲಮೀನ್ (ಓ ಸರ್ವಲೋಕಗಳ ಪರಿಪಾಲಕರೇ)! ನೀನು ನೀಡಿದ ಮೊದಲ ಪಾರಿತೋಷಕವನ್ನು ನಾವು ಅವಗಣಿಸಲಿಲ್ಲ. ವ್ಯರ್ಥಗೊಳಿಸಲಿಲ್ಲ. ಇಹ್‌ದಿನಸ್ಸಿರಾತಲ್ ಮುಸ್ತಖೀಮ್‌ನಲ್ಲಿ ಉಪದೇಶಿಸಲಾಗಿದೆ. ಮಾನವನು ಅಲ್ಲಾಹನಿಂದ ನೈಜ ಆತ್ಮದೃಷ್ಟಿಯನ್ನು ಬೇಡಬೇಕಾಗಿದೆ. ಏಕೆಂದರೆ ಅವನ ಅನುಗ್ರಹ ಮತ್ತು ಸಹಕಾರ ದೊರೆಯದಿದ್ದರೆ ಅಂಧಕಾರದಲ್ಲಿ ಮುಳುಗಿರುವ ಈ ದುರ್ಬಲ ಮನುಷ್ಯನಿಗೆ ಪ್ರಾರ್ಥನೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಎಲ್ಲಿಯವರೆಗೆ ಮನುಷ್ಯನು ಅಲ್ಲಾಹನ ರಹ್ಮಾನಿಯತ್ ಗುಣಗಳಿಂದ ಲಭಿಸಿದ ಅನುಗ್ರಹಗಳನ್ನು ಗೌರವಿಸಿ ಪ್ರಾರ್ಥಿಸುವುದಿಲ್ಲವೋ ಅಲ್ಲಿಯತನಕ ಉತ್ತಮ ಫಲ ದೊರೆಯಲು ಸಾಧ್ಯವಿಲ್ಲ.

ಕಾಲಾಂತರದಿಂದ ನಾನು ನೋಡಿದ್ದೇನೆ. ಬ್ರಿಟಿಷರ ಕಾನೂನುಗಳಲ್ಲಿ ತಖಾವ (ಸರಕಾರದಿಂದ ಕೃಷಿಕಾರ್ಯಕ್ಕಾಗಿ ಸಿಗುವಂತಹ ಸಹಾಯಧನ) ನೀಡುವುದಕ್ಕಿಂತ ಮೊದಲು ಕೆಲವು ಸಾಮಗ್ರಿಗಳನ್ನು ತೋರಿಸುವುದು ಅನಿವಾರ್ಯವಾಗಿರುತ್ತದೆ. ಅದೇ ರೀತಿ ದೈವಿಕ ನಿಯಮಗಳಲ್ಲಿಯೂ ನೋಡಿರಿ. ಮೊದಲು ನಮಗೆ ಏನೆಲ್ಲ ದೊರೆತಿದೆಯೋ ಅದರಿಂದ ನಾವು ಏನು ಮಾಡಿದೆವು? ಬುದ್ಧಿ ವಿವೇಕ, ಕಣ್ಣು, ಕಿವಿ ಇರುವಾಗಲೂ ದಾರಿ ತಪ್ಪಲಿಲ್ಲ. ಮೂರ್ಖರು, ಅವಿವೇಕಿಗಳಾಗಲಿಲ್ಲವಾದರೆ ಪ್ರಾರ್ಥಿಸಿರಿ. ಇನ್ನು ದೈವಾನುಗ್ರಹಗಳಿಗೆ ಪಾತ್ರರಾಗುವಿರಿ. ಇಲ್ಲವಾದರೆ ಇದು ವಂಚನೆ ಮತ್ತು ದೌರ್ಭಾಗ್ಯದ ಲಕ್ಷಣವಾಗಿರುವುದು.

### ವಿವೇಕತೆಯ ಅರ್ಥ

ಕೆಲವೊಮ್ಮೆ ನಮ್ಮ ಮೈತ್ರಿಗೆ ಕ್ರೈಸ್ತರೊಡನೆ ಸಂಬಂಧ ಹೊಂದಬೇಕಾಗಬಹುದು. ಅವರು ನೋಡಬಹುದಾಗಿದೆ. ಅವರಲ್ಲಿ ವಿವೇಕಶಾಲಿಯಾದ ಅಲ್ಲಾಹನಗೆ ಸಲ್ಲುವಂತಹ ಯಾವ ಪಾತ್ರ ಆ ಮೂರ್ಖರು ಹೊಂದಿರುವುದಿಲ್ಲ. ವಿವೇಕತೆಯ ಅರ್ಥವೇನು? **ವಝ್‌ಉಸ್ಸೈಯಿ ಫೀ ಮಹಲ್ಲಿಹೀ** ಆದರೆ ಅವರನ್ನು ನೋಡಿ ಯಾವ ಕಾರ್ಯವು ಮತ್ತು ಉಪದೇಶವು ಅದಕ್ಕನುಗುಣವಾಗಿ ಇರುವುದಿಲ್ಲ. **ಇಹ್‌ದಿನಸ್ಸಿರಾತಲ್ ಮುಸ್ತಖೀಮ್** ಮೇಲೆ ನಾವು ಯೋಚಿಸಿದಾಗ ಸನ್ಮಾರ್ಗ ಪಡೆಯಲು ಪ್ರಾರ್ಥನೆಯ ಉಪದೇಶ ನೀಡುತ್ತಿದೆ. ಆದರೆ **ಇಯ್ಯಾಕ ನಅಬುದು ವ ಇಯ್ಯಾಕ ನಸ್ತಯೀನ್** ಸ್ಪಷ್ಟಪಡಿಸುವುದೇನೆಂದರೆ ಇದರ ಪ್ರಯೋಜನ ಪಡೆಯಿರಿ. ಅರ್ಥಾತ್ ಸನ್ಮಾರ್ಗ ಪಡೆಯಲು ಬೇಕಾದ ವಿಧಾನಗಳಿಗಾಗಿ ದೈವಿಕ ಸಹಕಾರ ಪಡೆಯಬೇಕಾಗುತ್ತದೆ.

### ನೈತಿಕತೆ ಎಂದರೇನು?

ಈಗ ಯೋಚಿಸಬೇಕಾದ ವಿಷಯವೇನೆಂದರೆ ಬೇಡಬೇಕಾದ ವಿಷಯಗಳಾವುವು, ಮೊದಲನೆಯದಾಗಿ ನೈತಿಕತೆ ಅದು ಮನುಷ್ಯನನ್ನು ಮಾನವನಾಗಿ ರೂಪಿಸುತ್ತದೆ. ನೈತಿಕೆ ಎಂದರೆ ಕೇವಲ ಮೃದುತನ ಎಂದು ಭಾವಿಸಬೇಡಿರಿ. 'ಬಲ್ಜ್' ಮತ್ತು 'ಖುಲ್ಜ್' ಎರಡು ಪದಗಳಿವೆ. ಅವು ತದ್ವಿರುದ್ಧ ಅರ್ಥ ಸೂಚಿಸುತ್ತದೆ. ಖಲ್ಜ್ ಬಾಹ್ಯ ಸೃಷ್ಟಿಯ ಹೆಸರಾಗಿದೆ. ಉದಾಹರಣೆಗೆ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಜುಮುಅ ಖುತ್‌ಬ

"ಖಲೀಫರು ಮುಂದೆ ಇರಿಸುವ ಧರ್ಮ ಅಲ್ಲಾಹನ ಸಂರಕ್ಷಣೆಗೆ ಪಾತ್ರವಾಗಿರುತ್ತದೆ."

ಖಿಲಾಫತ್ ಎಂತಹದ್ದೆಂದರೆ ಅದರಿಂದ ದೂರ ಸರಿಯುವಿಕೆ ಮನುಷ್ಯನನ್ನು ಯಾವುದೇ ಗೌರವಕ್ಕೆ ಅರ್ಹನನ್ನಾಗಿ ಮಾಡುವುದಿಲ್ಲ.

ಪ್ರವಾದಿಗಳು ಆಜ್ಞೆ ಜಾರಿಗೊಳಿಸುವ ವ್ಯವಸ್ಥೆ ಮತ್ತು ಜಮಾಅತಿನ ನಿಝಾಮಿನ ಕೇಂದ್ರವಾಗಿರುತ್ತಾರೆ.

ಆದುದರಿಂದ ನನ್ನ ಆಜ್ಞೆಗಳ ಪಾಲನೆ ಆವಶ್ಯಕವೂ ಅನಿವಾರ್ಯವೂ ಆಗಿದೆ.

ಬೈಅತ್ ಮಾಡಿದವನಿಗಿರುವ ಸ್ಥಾನದಲ್ಲಿ ಬೈಅತ್ ಮಾಡದವನೂ ಇರುತ್ತಾನೆ ಎಂದು ಹೇಳುವವನು ವಾಸ್ತವದಲ್ಲಿ ಬೈಅತ್ ಎಂದರೇನು, ಜಮಾಅತಿನ ನಿಝಾಮ್ ಎಂದರೇನು ಎಂದು ಮನವರಿಕೆ ಮಾಡದವನಾಗಿರುತ್ತಾನೆ.

ಒಬ್ಬನು ಖಿಲಾಫತಿನ ಬೈಅತ್ ಮಾಡದೆಯೂ ಇಸ್ಲಾಮೀ ನಿಝಾಮ್‌ನಲ್ಲಿ ತನ್ನ ಸ್ಥಾನ ಉಳಿಸಬಲ್ಲನು ಎಂಬ ಯೋಚನೆ ವಾಸ್ತವಿಕತೆಗೆ ಮತ್ತು ಇಸ್ಲಾಮೀ ತತ್ವಗಳಿಗೆ ಸಂಪೂರ್ಣ ವಿರುದ್ಧವಾಗಿದೆ. ಇಂತಹ ಯೋಚನೆ ಹೃದಯದಲ್ಲಿ ಹೊಂದಿರುವವನು ಬೈಅತ್‌ನ ಬಗ್ಗೆ ಸ್ವಲ್ಪವೂ ಅರಿತುಕೊಂಡಿಲ್ಲ ಎಂದು ನಾನು ಭಾವಿಸುತ್ತೇನೆ.

ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಸಅದ್ ಬಿನ್ ಉಬಾದ ರಝಿಯಲ್ಲಾಹು ಅನ್ಹುರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.

ಅಹ್ಮದಿಯ ಮುಸ್ಲಿಮ್ ಜಮಾಅತ್ತನ ಸುದೀರ್ಘ ಕಾಲ ಸೇವೆ ಸಲ್ಲಿಸಿದ ಸೇವಕರಾದ ಮಾನ್ಯ ಸಯ್ಯದ್ ಮುಹಮ್ಮದ್ ಸರ್‌ವರ್ ಶಾಹ್ ಸಾಹೆಬ್ ಖಾದಿಯಾನ್ ಹಾಗೂ 50 ವರ್ಷಗಳ ಸುದೀರ್ಘ ಕಾಲ ಜಮಾಅತ್ತಿನ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಮುಕರ್ರಮ ಶೌಕತ್ ಗೌಹರ್ ಸಾಹೆಬ ಅವರ ಸದ್ಗುಣಗಳ ಪ್ರಸ್ತಾವನೆ ಮತ್ತು ಜುಮ್‌ಆ ನಮಾಝ್‌ನ ನಂತರ ಇವರಿಬ್ಬರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫತೂಹ್'** ಮಸೀದಿಯಲ್ಲಿ **17–01–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَ رَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَ اِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಸಅದ್ ಬಿನ್ ಉಬಾದರ(ರ) ಬಗ್ಗೆ ಹಿಂದಿನ ಕೆಲವು ಖುತ್‌ಬಗಳಲ್ಲಿ ಪ್ರಸ್ತಾಪಿಸಿದ್ದೆನು. ಈ ದಿನ ಅದರ ಕೊನೆಯ ಭಾಗ ವಿವರಿಸುವೆನು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಅನ್‌ಸಾರ್‌ಗಳು ಖಲೀಫರ ಸ್ಥಾನಕ್ಕೆ ಚುನಾಯಿಸಲು ಬಯಸಿದವರಲ್ಲಿ ಅವರ ಹೆಸರು ವಿಶಿಷ್ಟವಾಗಿ ಪ್ರಸ್ತಾಪಿಸಲ್ಪಡುತ್ತಿತ್ತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಅವರು ತಮ್ಮ ಗ್ರಂಥ ಸೀರತ್ ಖಾತಮನ್ನಬೀಯೀನ್(ಸ) ನಲ್ಲಿ ಬರೆದಿದ್ದಾರೆ. ಅನ್‌ಸಾರ್‌ಗಳು ಅವರನ್ನು ಖಲೀಫರ ಸ್ಥಾನಕ್ಕೆ ಚುನಾಯಿಸಲು ಬಯಸಿದ್ದರು. ಅವರು ತಮ್ಮ ಕೋಮಿನ ಮುಖಂಡರಾಗಿದ್ದರು. ಹಝ್ರತ್ ಅಬೂಬಕರ್(ರ) ರನ್ನು ಖಲೀಫರನ್ನಾಗಿ ಚುನಾಯಿಸಿದಾಗ ಅವರು ಅಸಂತೃಪ್ತರೂ ಆಗಿದ್ದರು. ಈ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಸವಿಸ್ತಾರವಾಗಿ ಬೆಳಕು ಚೆಲ್ಲಿದ್ದಾರೆ ಮತ್ತು ಖಿಲಾಫತ್ ಸ್ಥಾನದ ಮಹತ್ವದ ಬಗ್ಗೆ ವಿವರಿಸಿದ್ದಾರೆ. ಆದುದರಿಂದ ಆ ವಿವರಣೆ ತಿಳಿಕೊಳ್ಳುವುದು ಬಹಳ ಆವಶ್ಯಕವೆಂದು ಭಾವಿಸುತ್ತೇನೆ. ಅದಕ್ಕೆ ಹೆಚ್ಚು ಸಮಯದ ಆವಶ್ಯಕತೆ ಇದೆ. ಅದಕ್ಕೆ ಮೊದಲು ಒಂದು ಚಾರಿತ್ರಿಕ ಉಲ್ಲೇಖ ಸಹ ನಿಮ್ಮ ಮುಂದುರಿಸುತ್ತೇನೆ.

ಹುಮೈದ್ ಬಿನ್ ಅಬ್ದುರ್ರಹ್ಮಾನ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಹಝ್ರತ್ ಅಬೂಬಕರ್(ರ) ಮದೀನದ ಹೊರವಲಯದಲ್ಲಿದ್ದರು. ಅವರು ಮದೀನಕ್ಕೆ ಆಗಮಿಸಿದಾಗ ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರ ಚಹರೆಯಿಂದ ಬಟ್ಟೆ ಎತ್ತಿ ಹುಝೂರ್(ಸ) ಅವರ ಮುಖವನ್ನು ಚುಂಬಿಸಿ ಹೇಳಿದರು ನನ್ನ ತಂದೆ ತಾಯಂದಿರು ನಿಮ್ಮ ಮೇಲೆ ಬಲಿ ಆಗಲಿ! ಅವರು ಜೀವಿತಾವಧಿಯಲ್ಲಿಯು ಹಾಗೂ ಮರಣದ ಸಂದರ್ಭದಲ್ಲಿಯು ಪರಿಶುದ್ಧರಾಗಿದ್ದಿರೀ. ಅನಂತರ ಹೇಳಿದರು ಅಲ್ಲಾಹನಾಣೆ! ಮುಹಮ್ಮದ್ ಸಲಲ್ಲಾಹು ಅಲೈಹಿವಸಲ್ಲಮರು ನಿಧನ ಹೊಂದಿದ್ದಾರೆ. ತದನಂತರ ಹಝ್ರತ್ ಅಬುಬಕ್ಕರ್(ರ) ಮತ್ತು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರೊಂದಿಗೆ ಸಖೀಫ ಬನೂ ಸಾಯಿದದ ಕಡೆಗೆ ಸಾಗಿದರು. ಅಲ್ಲಿಗೆ ತಲಪಿದ ನಂತರ ಹಝ್ರತ್ ಅಬೂಬಕರ್(ರ) ಮಾತನಾಡಲು ತೊಡಗಿದರು. ಅವರು ಪವಿತ್ರ ಖುರ್‌ಆನ್ ವಚನಗಳನ್ನು ಮತ್ತು ಹದೀಸುಗಳನ್ನು ಉಲ್ಲೇಖಿಸಿ ಅನ್‌ಸಾರ್‌ಗಳ ಶ್ರೇಷ್ಠತೆ ವಿವರಿಸಿದರು. ಅನಂತರ ಅವರು ಹೇಳಿದರು ನಿಮ್ಮೆಲ್ಲರಿಗೆ ಅರಿವಿದೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಒಮ್ಮೆ ಹೇಳಿದರು ಒಂದು ವೇಳೆ ಎಲ್ಲಾ ಜನರು ಒಂದು ಕಣಿವೆಯಲ್ಲಿ ನಡೆದರೆ ಮತ್ತೊಂದು ಕಡೆ ಅನ್‌ಸಾರ್‌ಗಳು ನಡೆದರೆ ನಾನು ಅನ್‌ಸಾರ್‌ಗಳೊಂದಿಗೆ ನಡೆಯುವೆನು. ಅನಂತರ ಸಅದರನ್ನು ಅಭಿಮುಖೀಕರಿಸಿ ಹೇಳಿದರು. ಓ ಸಅದ್, ನೀವು ಕುಳಿತಿದ್ದಾಗ ನಿಮ್ಮ ಸಮ್ಮುಖದಲ್ಲಿಯೇ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರು ಖಿಲಾಫತ್‌ಗೆ ಹಕ್ಕುದಾರರು ಖುರೈಶಿಗಳಾಗಿರುವರು. ಜನರಲ್ಲಿ ಸಜ್ಜನರು ಖುರೈಶರ ಸಜ್ಜನರೊಂದಿಗೆ ಇರುವರು ಮತ್ತು ಕೆಟ್ಟವರು ಖುರೈಶರ ಕೆಟ್ಟವರೊಂದಿಗೆ ಇರುವರು ಎಂದು. ಅದಕ್ಕೆ ಹಝ್ರತ್ ಸಅದ್ ಹೇಳಿದರು: ನೀವು ಸತ್ಯ ಹೇಳಿದಿರಿ. ಹೌದು, ನಾವು ಮಂತ್ರಿ ಆಗಿದ್ದೇವೆ ಮತ್ತು ನೀವು ಅಮೀರರೂ ಆಗಿದ್ದೀರಿ. ಇದು ಮುಸ್‌ನದ್ ಅಹ್ಮದ್ ಬಿನ್ ಹಂಬಲ್‌ನಲ್ಲಿರುವ ಒಂದು ಹದೀಸ್ ಆಗಿದೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ–01, ಪುಟ–158–159, ಹದೀಸ್–18, ದಾರುಲ್ ಹದೀಸ್ ಖಾಹಿರ 1994)

ಅತ್ತಬಖಾತುಲ್ ಕುಬ್ರಾ ಎಂಬ ಗ್ರಂಥದಲ್ಲಿ ಈ ಘಟನೆಯ ವಿವರವು ಹೀಗೆ ಬರೆದಿದೆ: ಹಝ್ರತ್ ನಬಿ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಹಝ್ರತ್ ಅಬೂಬಕರ್(ರ) ಹಝ್ರತ್ ಸಅದ್

ಬಿನ್ ಉಬಾದರಿಗೆ ಸಂದೇಶ ಕಳುಹಿಸಿ ಹೇಳಿದರು: ನೀವು ಬಂದು ಬೈಅತ್ ಮಾಡಿರಿ. ಏಕೆಂದರೆ ಜನರು ಬೈಅತ್ ಮಾಡಿದ್ದಾರೆ. ನಿಮ್ಮ ಕೋಮಿನ ಜನರು ಸಹ ಬೈಅತ್ ಮಾಡಿದ್ದಾರೆ. ಅದಕ್ಕೆ ಹಝ್ರತ್ ಸಅದ್(ರ) ಹೇಳಿದರು ಅಲ್ಲಾಹನ ಆಣೆ! ನನ್ನ ಬಾಣಗಳನ್ನಿಡುವ ಕೋಷದಲ್ಲಿರುವ ಎಲ್ಲಾ ಬಾಣಗಳಿಂದ ಜನರನ್ನು ಹೊಡೆಯುವುದಿಲ್ಲವೋ ಅಲ್ಲಿಯ ತನಕ ನಾನು ಬೈಅತ್ ಮಾಡುವುದಿಲ್ಲ. ಅಂದರೆ ಇವರ ಪ್ರಕಾರ ಸಅದ್ ಬೈಅತ್ ಮಾಡಲು ನಿರಾಕರಿಸಿದರು ಮತ್ತು ತನ್ನೊಂದಿಗಿರುವ ತನ್ನ ಕೋಮಿನ ಜನರೊಂದಿಗೆ ನಿಮ್ಮೆಲ್ಲರ ಮೇಲೆ ಸೇಡು ತೀರಿಸಿಕೊಳ್ಳುವೆನು. ಹಝ್ರತ್ ಅಬೂಬಕರ್‌ರಿಗೆ ಈ ಸಮಾಚಾರ ತಿಳಿಯಿತು. ಬಶೀರ್ ಬಿನ್ ನಅದ್(ರ) ಹೇಳಿದರು: ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಲೀಫರೇ, ಅವರು ನಿಮ್ಮನ್ನು ನಿರಾಕರಿಸಿದ್ದಾರೆ ಮತ್ತು ಬಲವಂತ ಮಾಡಿದ್ದಾರೆ ಅಂದರೆ ನಿರಾಕರಿಸುವ ಜೊತೆಗೆ ಬಲವಂತ ಮಾಡುತ್ತಿದ್ದಾರೆ. ಅವರು ನಿಮ್ಮ ಬೈಅತ್ ಮಾಡುವುದಿಲ್ಲ ಅವರನ್ನು ಕೊಂದರೂ ಹಾಗೆ ಮಾಡಲಾರರು. ಅವರೊಂದಿಗೆ ಅವರ ಕೋಮಿನವರು ಮತ್ತು ಅವರ ಮಕ್ಕಳು ಇದ್ದಾರೆ ಅವರನ್ನು ಕೊಲ್ಲುವುದಕ್ಕು ಮುಂಚೆ ಅವರಿಗೆ ಎಂದೂ ಕೊಲ್ಲಲು ಧೈರ್ಯವಿಲ್ಲ. ಮತ್ತು ಅವರೆಲ್ಲರು ಖಝ್ರಜ್ ಗೋತ್ರದವರನ್ನು ಕೊಲ್ಲುವುದಕ್ಕು ಮುಂಚೆ ಇವರನ್ನು ಕೊಂದು ಹಾಕಲು ಅಸಾಧ್ಯ. ಮತ್ತು ಓಸ್ ಗೋತ್ರದವರನ್ನು ಕೊಂದು ಹಾಕುವುದಕ್ಕು ಮುಂಚೆ ಖಝ್ರಜ್‌ರನ್ನು ಕೊಲ್ಲುವುದು ಅಸಾಧ್ಯ. ಆದ್ದರಿಂದ ತಾವು ಅವರ ಕಡೆಗೆ ಸಾಗಬೇಡಿರಿ. ಅವರು ತಮಗೆ ಹಾನಿಯುಂಟು ಮಾಡಲಾರರು. ಅವರ ಕೋಮಿನ ಬಹುತೇಕ ಜನರು ಬೈಅತ್ ಮಾಡಿದ್ದಾರೆ. ಹಝ್ರತ್ ಅಬೂಬಕರ್‌ರವರು ಹಝ್ರತ್ ಬಶೀರರ ಸಲಹೆಯನ್ನು ಅಂಗೀಕರಿಸಿದರು ಮತ್ತು ಹಝ್ರತ್ ಸಅದರನ್ನು ಬಿಟ್ಟು ಬಿಟ್ಟರು.

ನಂತರ ಹಝ್ರತ್ ಉಮರ್(ರ) ಖಲೀಫರಾದಾಗ ಒಂದು ದಿನ ಸಅದರನ್ನು ಮದೀನದ ಮಾರ್ಗದಲ್ಲಿ ಭೇಟಿಯಾದಾಗ ಹಝ್ರತ್ ಉಮರ್(ರ) ಕೇಳಿದರು: ನೀವು ಮೊದಲು ಇದ್ದ ಹಾಗೆಯೇ ಈಗಲೂ ಇರುವಿರೋ? ಸಅದ್ ಹೇಳಿದರು: ಹೌದು ನಾನು ಹಾಗೆಯೇ ಇದ್ದೇನೆ. ಖಿಲಾಫತ್ತಿನ ಪದವಿ ನಿಮಗೆ ದೊರಕಿದೆ. ಅನೇಕ ಜನರು ನಿಮ್ಮ ಬೈಅತ್ ಸಹ ಮಾಡಿದ್ದಾರೆ ಆದರೆ ನಾನು ಬೈಅತ್ ಮಾಡಲಿಲ್ಲ. ಅನಂತರ ಸಅದ್ ಹೇಳಿದರು: ಅಲ್ಲಾಹನಾಣೆ ನಿಮ್ಮ ಸಂಗಡಿಗ ಹಝ್ರತ್ ಅಬೂಬಕರ್ ನಮಗೆ ನಿಮಗಿಂತ ಹೆಚ್ಚು ಪ್ರಿಯರಾಗಿದ್ದರು. ಅಲ್ಲಾಹನಾಣೆ ನಾನು ನಿಮ್ಮ ನೆರೆಹೊರೆಯಾಗುವುದನ್ನು ಇಷ್ಟಪಡುವುದಿಲ್ಲ. ಇದಕ್ಕೆ ಹಝ್ರತ್ ಉಮರ್(ರ) ಹೇಳಿದರು ಯಾರು ತನ್ನ ನೆರೆಹೊರೆಯವನ ಒಡನಾಟವನ್ನು ಇಷ್ಟಪಡುವುದಿಲ್ಲವೋ ಅವನು ಅವನಿಂದ ಬೇರೆಯಾಗುವುದು ಉತ್ತಮ. ಹಝ್ರತ್ ಸಅದ್(ರ) ಹೇಳಿದರು ನಾನು ಇದು ಎಂದೂ ಮರೆಯುವುದಿಲ್ಲ ಅಂದರೆ ನಾನು ಇದು ಮಾಡಿಯೇ ತೀರುವೆನು. ನಾನು ಹಝ್ರತ್ ಉಮರ್(ರ) ಅವರಿಂದ ಉತ್ತಮ ನೆರೆಹೊರೆಯ ಕಡೆಗೆ ಸಾಗುವೆನು ಎಂದು ಭಾವಿಸುತ್ತಿದ್ದರು. ಕೆಲವು ದಿನಗಳ ನಂತರ ಹಝ್ರತ್ ಸಅದ್(ರ) ಹಝ್ರತ್ ಉಮರ್(ರ) ಅವರ ಖಿಲಾಫತ್ ಕಾಲದಲ್ಲಿ ಸಿರಿಯಕ್ಕೆ ಹಿಜ್‌ರತ್ ಮಾಡಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ-3, ಪುಟ-312, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ ಲೆಬನಾನ್ 1996)

ಹಝ್ರತ್ ಸಅದ್ ಬಗ್ಗೆ ಹೀಗೆ ಸಹ ಒಂದು ಪ್ರಸ್ತಾವ ಸಿಗುತ್ತದೆ. ಅವರು ಹಝ್ರತ್ ಅಬೂಬಕರ್‌ರನ್ನು ಬೈಅತ್ ಮಾಡಿದ್ದರೆಂದು. ತಬರಿಯ ಚರಿತ್ರೆ ಗ್ರಂಥದಲ್ಲಿ ಹೀಗೆ ಬರೆದಿದೆ:

**ವತ್ತಬಅಲ್ ಖೌಮು ಅಲಲ್ ಬೈಅತಿ ವ ಬಾಯಿಅ ಸಅದ್**. ಕೋಮಿನ ಎಲ್ಲರೂ ಒಬ್ಬರ ನಂತರ ಇನ್ನೊಬ್ಬರಾಗಿ ಹಝ್ರತ್ ಅಬೂಬಕರರನ್ನು(ರ) ಬೈಅತ್ ಮಾಡಿದರು. ಸಅದ್ ಸಹ ಬೈಅತ್ ಮಾಡಿದರು. (ತಾರೀಖೆ ತಬರಿ ಸಂಪುಟ-3, ಪುಟ-266, ದಾರುಲ್‌ಫಿಕರ್ ಬೈರೂತ್ 2002)

ನಾನು ಹೇಳಿದ ಹಾಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ನೀಡಿದ ವಿವರಣೆಯಲ್ಲಿ ಬಹಳಷ್ಟು ವಿಷಯಗಳು ವ್ಯಕ್ತವಾಗುತ್ತದೆ. ಖಿಲಾಫತ್‌ನ ಬೈಅತ್ ಮಾಡುವುದು ಅವಶ್ಯಕವೇ, ಖಿಲಾಫತ್ತಿನ ಮಹತ್ವ ಏನು ಮತ್ತು ಹಝ್ರತ್ ಸಅದ್(ರ) ಮಾಡಿದ ಕೃತ್ಯದ ನೈಜ್ಯತೆ ಏನಿದೆ?

ಹಝ್ರತ್ ಮುಸ್ಲಿಹ್ ಮೌಊದ್(ರ) ತಮ್ಮ ಒಂದು ಖುತ್‌ಬ ಜುಮುಆದಲ್ಲಿ ಹೇಳಿದರು "**ಖತಲ್**‌ನ ಅರ್ಥವು ಸಂಬಂಧ ಮುರಿಯುವುದು ಆಗುತ್ತದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ನಿಧನದ ನಂತರ ಸಹಾಬರಲ್ಲಿ ಖಿಲಾಫತ್ತಿನ ಬಗ್ಗೆ ಭಿನ್ನಭಿಪ್ರಾಯ ತಲೆದೋರಿದುವು. ಅನ್‌ಸಾರ್‌ಗಳು ಯೋಚಿಸುತ್ತಿದ್ದರು ಖಿಲಾಫತ್ತಿನ ಮೇಲೆ ನಮ್ಮ ಅಧಿಕಾರ ಇದೆ, ನಾವು ಎಹ್‌ಲೆ ಬಲದ್ ಆಗಿದ್ದೇವೆ. ಕನಿಷ್ಠ ಪಕ್ಷ ಒರ್ವ ಖಲೀಫ ಮುಹಾಜಿರೀನರಲ್ಲಿ ಆದರೆ ಒರ್ವ ಖಲೀಫ ಅನ್ಸಾರ್‌ಗಳಿಂದನೂ ಆಗಬೇಕು." ಅಂದರೆ ಇಬ್ಬರು ಆಗಬೇಕು. "ಬನೂ ಹಾಶಿಮ್ ಗೋತ್ರದವರು ಖಿಲಾಫತ್ ನಮ್ಮ ಹಕ್ಕೆಂದು ತಿಳಿದಿದ್ದರು. ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ನಮ್ಮ ಕುಟುಂಬಕ್ಕೆ ಸೇರಿದ್ದರು. ಮುಹಾಜಿರ್‌ಗಳು, ಖಲೀಫರು ಖುರೈಶಿ ಗೋತ್ರದವರಾಗಬೇಕೆಂದು ಇಚ್ಛಿಸುತ್ತಿದ್ದರೂ ಯಾವುದೇ ವ್ಯಕ್ತಿಯ ಹೆಸರನ್ನು ಹೇಳುತ್ತಿರಲಿಲ್ಲ. ಖಲೀಫರು ಚುನಾಯಿಸಲ್ಪಡಲಿ ಎಂದು ಆಶಿಸುತ್ತಿದ್ದರು. "ಮುಸ್ಲಿಮರು ಯಾರಿಗೆ ತನ್ನ ಖಲೀಫ ಎಂದು ನಿಯೋಜಿಸುವರೊ ಅವರನ್ನು ಖಲೀಫರನ್ನಾಗಿ ಸ್ವೀಕರಿಸಲು ಸಿದ್ಧರಾಗಿದ್ದರು. ಅವರ ಈ ಅಭಿಪ್ರಾಯದೊಂದಿಗೆ ಬನೂ ಹಾಶಿಮ್ ಗೋತ್ರದವರೂ ಅನ್‌ಸಾರ್‌ಗಳೂ ಒಮ್ಮತ ಪ್ರಕಟಿಸಿದರು. ಆದರೆ ಒಬ್ಬ ಸಹಾಬಿಗೆ ಅದು ತೃಪ್ತಿಕರವಾಗಿರಲಿಲ್ಲ. ಅನ್‌ಸಾರಿ ಸಹಾಬಿಯಾಗಿದ್ದ ಅವರನ್ನು ಅನ್‌ಸಾರ್‌ಗಳು ಖಲೀಫರನ್ನಾಗಿ ಮಾಡಲು ಇಚ್ಛಿಸಿದ್ದರು. ಆ ಸಹಾಬಿ ಹೇಳಿದರು: "ನಾನು ಅಬೂಬಕರ್‌ರನ್ನು(ರ) ಬೈಅತ್ ಮಾಡಲು ಸಿದ್ಧನಿಲ್ಲ. ಆ ಸಂದರ್ಭದಲ್ಲಿ ಹಝ್ರತ್ ಉಮರ್(ರ) ಹೀಗೆ ಹೇಳಿದರು: **ಉಖ್‌ತುಲೂ ಸಅದ್** ಎಂದರೆ ಸಅದನನ್ನು ಕೊಲ್ಲಿರಿ. ಆದರೆ ಹಝ್ರತ್ ಉಮರ್(ರ) ಸ್ವತಃ ಅವರನ್ನು ಕೊಲ್ಲಲಿಲ್ಲ. ಬೇರೆ ಯಾರೂ ಸಹ ಅವರನ್ನು ಕೊಲ್ಲಲಿಲ್ಲ. ಭಾಷೆಯ ಪಂಡಿತರಾದ ಕೆಲವರು ಹೇಳುತ್ತಾರೆ, ಉಮರ್ ಉದ್ದೇಶಿಸಿದುದು ಸಅದ್‌ನೊಂದಿಗೆ ಸಂಬಂಧ ವಿಚ್ಛೇಧಿಸಿರಿ ಎಂದಾಗಿದೆ. ಏಕೆಂದರೆ ಖತ್‌ಲ್ ಎಂಬ ಶಬ್ದ, ಸಂಬಂಧ ವಿಚ್ಛೇಧನೆ ಮತ್ತು ಸಮಾಜದಿಂದ ಬೇರ್ಪಡಿಸುವುದು ಎಂಬ ಅರ್ಥಗಳಲ್ಲೂ ಬಳಸಲಾಗುತ್ತಿದೆ." (ಖುತ್‌ಬಾತೆ ಮಹ್ಮೂದ್ ಸಂಪುಟ-16, ಪುಟ-81-82, 01-02-1935)

ಹಝ್ರತ್ ಮುಸ್ಲಿಹ್ ಮೌಊದ್(ರ) ಸಅದ್ ಬಿನ್ ಉಬಾದ(ರ) ಅವರ ಈ ಘಟನೆಯನನ್ನು ವಿವರಿಸುತ್ತಾ ಹೆಳುತ್ತಾರೆ: ನಾನು ಮೊದಲು ಒಂದು ಖುತ್‌ಬದಲ್ಲಿ ಓರ್ವ ಅನ್ಸಾರಿ ಸಹಾಬಿಯ ಪ್ರಸ್ತಾವನೆಯಲ್ಲಿ ಹೇಳಿದ್ದೆ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ನಿಧನ ಹೊಂದಿದಾಗ ಕೆಲ ಅನ್ಸಾರ್‌ಗಳು ತಮ್ಮಲ್ಲಿ ಖಲೀಫ ಆಗಬೇಕೆಂದು ಯೋಚಿಸುತ್ತಿದ್ದರು. ಆದರೆ ಮುಹಾಜಿರೀನರು ವಿಷೇಶವಾಗಿ ಹಝ್ರತ್ ಅಬುಬಕ್ಕರ್(ರ) ಅವರು ಸಹಾಬರೊಂದಿಗೆ ಹೇಳಿದರು ಈ ರೀತಿಯ ಚುನಾವಣೆ ಇಸ್ಲಾಮಿನಲ್ಲಿ ಮಾಡುವುದು ಸರಿಯಲ್ಲ ಇಂತಹ ಚುನಾವಣೆಗೆ ಮುಸ್ಲಿಮರು ಎಂದೂ ಒಪ್ಪುವುದಿಲ್ಲ. ಅಂದರೆ ಚುನಾಯಿಸಲು ಅನ್ಸಾರ್ ಮತ್ತು ಮುಹಾಜಿರೀನರು ಯಾವುದೇ ಮುಹಾಜಿರ್‌ನರ ಕೈ ಮೇಲೆ ಬೈಅತ್ ಮಾಡಲು ಸಿದ್ಧರಾದರು. ಕೊನೆಗೆ ಎಲ್ಲರು ಹಝ್ರತ್ ಅಬುಬಕ್ಕರ್(ರ) ಅವರನ್ನು ಖಲೀಫ ಎಂದು ಸ್ವೀಕರಿಸಲು ಸಿದ್ಧರಾದರು. ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿಯುತ್ತಾರೆ: ಆ ಸಂದರ್ಭದಲ್ಲಿ ಹಝ್ರತ್ ಸಅದ್(ರ) ಬೈಅತ್ ಮಾಡಲು ಸಿದ್ಧವಾಗಲಿಲ್ಲ. ಆ ಸಂದರ್ಭದಲ್ಲಿ ಹಝ್ರತ್ ಉಮರ್(ರ) ಹೀಗೆ ಹೇಳಿದರು: **ಉಖ್‌ತುಲೂ ಸಅದ್** ಎಂದರೆ ಸಅದನನ್ನು ಕೊಲ್ಲಿರಿ. ಆದರೆ ಹಝ್ರತ್ ಉಮರ್(ರ) ಸ್ವತಃ ಅವರನ್ನು ಕೊಲ್ಲಲಿಲ್ಲ. ಬೇರೆ ಯಾರೂ ಸಹ ಅವರನ್ನು ಕೊಲ್ಲಲಿಲ್ಲ. ಅವರು ಹಝ್ರತ್ ಉಮರ್(ರ) ಅವರ ಖಿಲಾಫತ್ ಕಾಲಘಟ್ಟದ ತನಕ ಜೀವಿಸಿದ್ದರು ಮತ್ತು ಅವರ ಖಿಲಾಫತ್ ಕಾಲದಲ್ಲಿ ಸೀರಿಯಾದಲ್ಲಿ ಮೃತರಾದರು. ಭಾಷೆಯ ಪಂಡಿತರಾದ ಕೆಲವರು ಹೇಳುತ್ತಾರೆ, ಉಮರ್ ಉದ್ದೇಶಿಸಿದುದು ಸಅದ್‌ನೊಂದಿಗೆ ಸಂಬಂಧ ವಿಚ್ಛೇಧಿಸಿರಿ ಎಂದಾಗಿದೆ. ಏಕೆಂದರೆ **ಖತ್‌ಲ್** ಎಂಬ ಶಬ್ದ, ಸಂಬಂಧ ವಿಚ್ಛೇಧನೆ ಮತ್ತು ಸಮಾಜದಿಂದ ಬೇರ್ಪಡಿಸುವುದು ಎಂಬ ಅರ್ಥಗಳಲ್ಲೂ ಬಳಸಲಾಗುತ್ತಿದೆ. ಅರಬಿ ಭಾಷೆಯಲ್ಲಿ ಖತಲ್‌ಗೆ ಅನೇಕ ಅರ್ಥಗಳಿವೆ. ಉರ್ದು ಭಾಷೆಯಲ್ಲಿ ಖತಲ್‌ನ ಅರ್ಥ ದೈಹಿಕವಾಗಿ ಕೊಲ್ಲುವುದಾಗಿದೆ. ಆದರೆ ಅರಬಿ ಭಾಷೆಯಲ್ಲಿ ಖತಲ್ ಎಂಬ ಪದ ಬಳೆಸಿದರೆ ಅದು ಬಹಳಷ್ಟು ಅರ್ಥಗಳು ಒಳಗೊಂಡಿರುತ್ತದೆ. ಅದರಲ್ಲಿ ಒಂದರ್ಥ ಸಂಬಂಧ ವಿಚ್ಛೇದನೆ ಎಂದಾಗಿದೆ. ಭಾಷೆಯ ಪಂಡಿತರು ಹೇಳುತ್ತಾರೆ. ಉಮರ್ ಉದ್ದೇಶಿಸಿದುದು ಸಅದ್‌ನೊಂದಿಗೆ ಸಂಬಂಧ ವಿಚ್ಛೇಧಿಸಿರಿ ಎಂದಾಗಿದೆ. ಏಕೆಂದರೆ ಖತ್‌ಲ್ ಎಂಬ ಶಬ್ದ, ಸಂಬಂಧ ವಿಚ್ಛೇಧನೆ ಮತ್ತು ಸಮಾಜದಿಂದ ಬೇರ್ಪಡಿಸುವುದು ಎಂದಾಗಿದೆ. ಖತ್‌ಲ್ ಎಂದರೆ ಕೊಲ್ಲುವುದೇ ಆಗಿದ್ದರೆ ಹಝ್ರತ್ ಉಮರ್(ರ) ರಂತಹ ಬಹಳ ಭಾವೋದ್ವೇಗ ಭರಿತ ವ್ಯಕ್ತಿ ಸಅದರನ್ನು ಏಕೆ ಕೊಲ್ಲಲಿಲ್ಲ? ಹಝ್ರತ್ ಸಅದ್ ಹಝ್ರತ್ ಉಮರರ(ರ) ಖಿಲಾಫತ್ ಕಾಲದ ತನಕ ಜೀವಿಸಿದ್ದರು ಮತ್ತು ಅವರ ಖಿಲಾಫತ್ ಕಾಲದಲ್ಲಿ ಸಿರಿಯಾದಲ್ಲಿ ಮೃತರಾದರು. ಅವರನ್ನು ಯಾರೂ ಕೊಂದಿರಲಿಲ್ಲ. ಇದರಿಂದ ಅರ್ಥವಾಗುವುದೇನೆಂದರೆ ಖತ್‌ಲ್ ಎಂದರೆ ಸಂಬಂಧ ವಿಚ್ಛೇದನೆ ಮತ್ತು ಬಹಿಷ್ಕರ ಎಂಥಾಗಿದೆ ಮತ್ತು ಅವರು ಸಾಮಾನ್ಯ ಸಹಾಬಿಯಾಗಿರಲಿಲ್ಲ. ಹಝ್ರತ್ ಸಅದ್(ರ) ಅವರಿಂದ ಬೇರೆ ಆದರು ಆದರೆ ಯಾರು ಸಹ ಅವರ ಮೇಲೆ ಕೈ ಎತ್ತಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಒಂದು ಉದಾಹರಣೆ ನೀಡಿದ್ದೆ ಸ್ವಪ್ನದಲ್ಲಿ ಸಹ ಯಾರಾದರೊಬ್ಬನ ಬಗ್ಗೆ ಅವನು ಕೊಲ್ಲಲ್ಪಡುವುದಾಗಿ ಕಂಡರೆ ಅದರ ಅರ್ಥ ಸಂಬಂಧ ವಿಚ್ಛೇಧನೆ ಮತ್ತು ಬಹಿಷ್ಕಾರ ಎಂದಾಗಬಹುದಾಗಿದೆ. ಒಂದು ಖುತ್‌ಬದಲ್ಲಿ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ:

ನನ್ನೊಂದಿಗೆ ಒಬ್ಬ ಸ್ನೇಹಿತ ಹೇಳಿದರು: ಒಬ್ಬ ವ್ಯಕ್ತಿ ನನ್ನ ಈ ಖುತ್‌ಬದ ನಂತರ ಹೇಳುತ್ತಾನೆ: ಸಅದ್ ಬೈಅತ್ ಮಾಡದಿದ್ದರೂ ಅವರನ್ನು ಸಲಹೆಗಾರರೊಂದಿಗೆ ನಿಶ್ಚಯವಾಗಿಯೂ ಸೇರಿಸಲಾಗುತ್ತಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆ ವ್ಯಕ್ತಿ ಹೇಳಿದ ಮಾತಿಗೆ ಎರಡು ಅರ್ಥಗಳಿವೆ. ನಾನು ಹೇಳಿದುದನ್ನು ಅವನು ಅಲ್ಲಗಳೆಯುತ್ತಿದ್ದಾನೆ. ಅಂತಹ ಸಂಭವ ನಡೆದಿಲ್ಲ ಎಂದು ಹೇಳುತ್ತಿದ್ದಾನೆ ಅಥವಾ ಖಿಲಾಫತಿಗೆ ಬೈಅತ್ ಮಾಡದಿರುವುದು ಅಷ್ಟೇನೂ ದೊಡ್ಡ ಅಪರಾಧವಲ್ಲ ಏಕೆಂದರೆ ಸಅದ್(ರ) ಬೈಅತ್ ಮಾಡಿರಲಿಲ್ಲ ಆದರೆ ಅವರನ್ನು ಸಲಹೆಗಳಲ್ಲಿ ಸೇರಿಸುತ್ತಿದ್ದರು ಎಂದು ಆತ ತಿಳಿದಿರುವಂತಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ ಓರ್ವ ಕವಿ ಹೇಳುತ್ತಾನೆ:

**ತಾ ಮರ್ದ್ ಸುಖನ್ ನಗುಫ್ತ ಬಾಷದ್**
**ಅಐಬ್ ವಹುನರಷ್ ನಹುಫ್ತ ಬಾಷದ್**

ಅಂದರೆ ಮನುಷ್ಯನು ಮಾತನಾಡುವ ತನಕ ಅವನಲ್ಲಿರುವ ನ್ಯೂನ್ಯತೆಗಳು ಅಥವಾ ಕೌಶಲ್ಯಗಳು ವ್ಯಕ್ತವಾಗುವುದಿಲ್ಲ. ಮನುಷ್ಯ ಮಾತನಾಡಿದ ನಂತರ ಕೆಲವೊಮ್ಮೆ ತನ್ನ ನ್ಯೂನ್ಯತೆಗಳನ್ನು ವ್ಯಕ್ತಗೊಳಿಸುತ್ತಾನೆ. ಕೆಲವೊಮ್ಮೆ ದಡ್ಡತನತ ಮಾತುಗಳನ್ನು ಆಡಿದಾಗ ಅವನಲ್ಲಿರುವ ನ್ಯೂನ್ಯತೆಗಳು ವ್ಯಕ್ತವಾಗುತ್ತವೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ ಹಝ್ರತ್ ಸಅದ್(ರ) ಅವರನ್ನು ಸಲಹೆಗಾರರನ್ನಾಗಿ ಸೇರಿಸಲಾಗುತ್ತಿತ್ತು ಅಥವಾ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಖುತ್‌ಬದ ಮೇಲೆ ವಿವಾದ ಮಾಡಿದ ವ್ಯಕ್ತಿಯ ಮಾತಿನಿಂದ ವ್ಯಕ್ತವಾಗುವುದೇನೆಂದರೆ ಅವನು ಖಿಲಾಫತ್ತಿನ ಬೈಅತ್ ಮಾಡುವುದು ಅವಶ್ಯಕವಲ್ಲ ಅಥವಾ ತನ್ನ ಜ್ಞಾನವನ್ನು ತೋರ್ಪಡಿಸುತ್ತಿದ್ದಾನೆ ಆದರೆ ಈ ಎರಡೂ ಮಾತು ತಪ್ಪಾಗಿದೆ. ಜ್ಞಾನವನ್ನು ತೋರ್ಪಡಿಸುವುದು ವ್ಯರ್ಥವಾಗಿದೆ ಏಕೆಂದರೆ ಇವನ ಈ ಮಾತನ್ನು ಆಲಿಸುವ ಪ್ರತಿಯೊಬ್ಬನು ಮುಗುಳನಗೆ ನಗುತ್ತಾನೆ. ಸಹಾಬರ ಬಗ್ಗೆ ಇಸ್ಲಾಮೀ ಚರಿತ್ರೆಯ ಮೂರು ಗ್ರಂಥಗಳು ಬಹಳ ಪ್ರಸಿದ್ಧವಾಗಿವೆ. ತಹ್‌ಝೀಬುತ್ತಹ್‌ಝೀಬ್, ಇಸಾಬ ಮತ್ತು ಅಸದುಲ್ ಗಾಭ. ಈ ಮೂರು ಗ್ರಂಥಗಳಲ್ಲಿಯೂ ಹೀಗೆ ಬರೆದಿದೆ: ಸಅದ್ ಉಳಿದ ಸಹಾಬರಿಂದ ದೂರ ಸರಿದು ಸಿರಿಯಾ ದೇಶಕ್ಕೆ ಹೋದರು ಮತ್ತು ಅಲ್ಲಿಯೇ ಮೃತರಾದರು ಮತ್ತು ಕೆಲ ಭಾಷೆಯ ಗ್ರಂಥಗಳಲ್ಲಿ ಖತ್‌ಲ್‌ನ ಪದವನ್ನು ಪರಿಶೀಲಿಸಿ ಈ ಘಟನೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸಹಾಬರಲ್ಲಿ ಅರುವತ್ತು–ಎಪ್ಪತ್ತು ಜನರ ಹೆಸರು ಸಅದ್ ಎಂದಿದೆ. ಅವರಲ್ಲೊಬ್ಬರು ಸಅದ್ ಬಿನ್ ಅಬೀ ವಖಾಸ್, ಅಶ್‌ರ ಮುಬಶ್ಶರರಲ್ಲಿ (ಶುಭವಾರ್ತೆ ನೀಡಲ್ಪಟ್ಟ ಹತ್ತು ಜನರಲ್ಲಿ) ಒಬ್ಬರಾಗಿದ್ದರು. ಇವರು ಹಝ್ರತ್ ಉಮರ್(ರ) ಅವರ ಪ್ರಧಾನ ದಂಡನಾಯಕನನ್ನಾಗಿ ನೇಮಿಸಿದ್ದರು ಮತ್ತು ಅವರನ್ನು ಎಲ್ಲಾ ವಿಷಯಗಳಲ್ಲಿ ಸಲಹೆಗಾರರನ್ನಾಗಿ ಸೇರಿಸುತ್ತಿದ್ದರು. ಇದರಿಂದ ಅರ್ಥವಾಗುವುದೆನೆಂದರೆ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಖುತ್‌ಬದ ಮೇಲೆ ಆಕ್ಷೇಪಣೆ ಮಾಡಿದ್ದ ವ್ಯಕ್ತಿ ತನ್ನ ಅಜ್ಞಾನದ ಕಾರಣದಿಂದ ಸಅದ್ ಎಂಬ ಹೆಸರು ಆಲಿಸಿದಾಗ ಈ ಸಅದ್ ಬೇರೆ, ಆ ಸಅದ್ ಬೇರೆ ಎಂದು ಮನವರಿಕೆ ಮಾಡದೆ ದಿಡೀರೆಂದು ನನ್ನ ಖುತ್‌ಬದ ಬಗ್ಗೆ ವಿಮರ್ಶಿಸಿದನು. ಇಲ್ಲಿ ನಾನು ಸಅದ್ ಬಿನ್ ಅಬಿ ವಖಾಸ್(ರ) ಮುಹಾಜಿರ್ ಅವರ ಬಗ್ಗೆ ಪ್ರಸ್ತಾಪಿಸಿಲ್ಲ ಬದಲಿಗೆ ಅನ್ಸಾರ್‌ಗಳಿಂದ ಆದ ಸಅದ್ ಅವರ ಬಗ್ಗೆ ಪ್ರಸ್ತಾಪಿಸಿದ್ದೇನೆ. ಇವರಿಬ್ಬರಲ್ಲದೆ ಇನ್ನೂ ಅರವತ್ತು ಎಪ್ಪತ್ತರಷ್ಟು ಸಅದ್ ಇದ್ದರು. ನಾನು ಪ್ರಸ್ತಾಪಿಸಿದ್ದ ಸಅದ್ ಅವರ ಪೂರ್ಣ ಹೆಸರು ಸಅದ್ ಬಿನ್ ಉಬಾದ(ರ) ಆಗಿದ್ದರು. ಅರಬ್ ಜನರಲ್ಲಿ ಹೆಸರು ಬಹಳ ಕಡಿಮೆ ಇರುತಿತ್ತು. ಕೆಲವೊಮ್ಮೆ ಒಂದೇ ಹೆಸರಿನವರು ಅನೇಕ ಜನರಿರುತ್ತಿದ್ದರು. ಯಾರಾದರು ಈ ಬಗ್ಗೆ ಮಾತನಾಡಬೇಕಾದರೆ ಅವನ ಹೆಸರೊಂದಿಗೆ ಅವನ ತಂದೆಯ ಹೆಸರು ಸೇರಿಸಿ ಮಾತನಾಡ ಬೇಕಾಗಿತ್ತು. ಉದಾಹರಣೆಗೆ ಕೇವಲ ಸಅದ್ ಅಥವಾ ಸಯೀದ್ ಎಂದು ಕರೆಯುತ್ತಿರಲಿಲ್ಲ ಬದಲಿಗೆ ಸಅದ್ ಬಿನ್ ಉಬಾದ ಅಥವಾ ಸಅದ್ ಬಿನ್ ಅಬಿ ವಖಾಸ್ ಎಂದು ಕರೆಯುತ್ತಿದ್ದರು. ಮತ್ತೆ ಇನ್ನು ಕೆಲವೊಮ್ಮೆ ತಂದೆಯ ಹೆಸರಿನಿಂದ ಯಾರೆಂದು ಅರ್ಥವಾಗದಿದ್ದರೆ ಅವನ ಸ್ಥಳದ ಹೆಸರು ಅಥವಾ ಗೋತ್ರದ ಹೆಸರು ತೆಗೆದುಕೊಂಡು ಹೇಳುತ್ತಿದ್ದರು. ಆಕ್ಷೇಪ ಎಸಗುವ ವ್ಯಕ್ತಿಯಿಂದ ತಿಳಿಯುವುದೇನೆಂದರೆ ಹೆಸರುಗಳ ಗೊಂದಲದಿಂದ ಅವರು ಆಕ್ಷೇಪಿಸಿದ್ದಾರೆ. ಇಂತಹ ಮಾತುಗಳು ಮನುಷ್ಯನ ಜ್ಞಾನ ವರ್ಧಿಸುವವುಗಳಲ್ಲ. ಅದು ಅಜ್ಞಾನವನ್ನು ಬಹಿರಂಗ ಪಡಿಸುವಂತಹದಾಗಿರುತ್ತವೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಪುನಃ ಹೇಳುತ್ತಾರೆ: ಖಿಲಾಫತ್ ಎಂತಹದ್ದೆಂದರೆ ಅದರಿಂದ ದೂರ ಸರಿಯುವಿಕೆ ಮನುಷ್ಯನನ್ನು ಯಾವುದೇ ಗೌರವಕ್ಕೆ ಅರ್ಹನನ್ನಾಗಿ ಮಾಡುವುದಿಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಿದ್ದರು: ಪ್ರಥಮ ಖಲೀಫರ ಶತ್ರು ಯಾರೆಂದು ನಿಮಗೆ ತಿಳಿದಿದೆಯೋ? ಪವಿತ್ರ ಖುರ್‌ಆನ್ ಓದಿರಿ. ನಿಮಗೆ ತಿಳಿಯುವುದು ಪ್ರಥಮ ಖಲೀಫರ ಶತ್ರು ಇಬ್ಲೀಸ್ ಆಗಿದ್ದನೆಂದು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಪುನಃ ಹೇಳುತ್ತಾರೆ: ನಾನು ಖಲೀಫ ಆಗಿದ್ದೇನೆ. ನನ್ನ ಶತ್ರು ಸಹ ಇಬ್ಲೀಸ್ ಆಗಿದ್ದಾನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಖಲೀಫ ದೇವನಿಯೋಜಿತನಾಗಿರುವುದಿಲ್ಲ ಎಂಬುದರ ಬಗ್ಗೆ ಸಂಶಯವಿಲ್ಲ. ಆದರೆ ಖಲೀಫ, ದೇವ ನಿಯೋಜಿತನಾಗದಿರುವುದು ಸಹ ಆವಶ್ಯಕವಲ್ಲ. ಹಝ್ರತ್ ಆದಮ್(ಅ) ದೇವನಿಯೋಜಿತರೂ ಖಲೀಫರೂ ಆಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ದೇವನಿಯೋಜಿತರೂ ಖಲೀಫರೂ ಆಗಿದ್ದರು. ಅದೇ ರೀತಿ ಎಲ್ಲಾ ಪ್ರವಾದಿಗಳು ದೇವನಿಯೋಜಿತರು ಹಾಗೂ ಖಲೀಫರೂ ಆಗಿದ್ದರು. ಪ್ರತಿಯೊಬ್ಬ ಮನುಷ್ಯನು ಒಂದು ರೀತಿಯಲ್ಲಿ ಖಲೀಫನಾಗಿರುವ ಹಾಗೆ ಪ್ರವಾದಿಗಳೂ ಖಲೀಫರಾಗಿರುತ್ತಾರೆ. ಆದರೆ ಒಂದು ರೀತಿಯಲ್ಲಿ ಖಲೀಫರು ಎಂದೂ ದೇವನಿಯೋಜಿತರಾಗುವುದಿಲ್ಲ, ಆದರೂ ಅನುಸರಣೆಗೆ ಸಂಬಂಧಿಸಿ ಖಲೀಫರು ಮತ್ತು ಪ್ರವಾದಿಗಳಲ್ಲಿ ವ್ಯತ್ಯಾಸವಿಲ್ಲ. ಪ್ರವಾದಿಗಳನ್ನು ಅನುಸರಿಸುವುದು ಆವಶ್ಯಕವಾಗಿರುವ ಹಾಗೆಯೇ ಖಲೀಫರನ್ನು ಅನುಸರಿಸುವುದು ಸಹ ಆವಶ್ಯಕವಾಗಿದೆ. ಈ ಎರಡು ವರ್ಗದವರನ್ನು ಅನುಸರಿಸುವುದಕ್ಕೆ ಸಂಬಂಧಿಸಿ ಇರುವ ವ್ಯತ್ಯಾಸವೇನೆಂದರೆ ಪ್ರವಾದಿಗಳು ಅಲ್ಲಾಹನ ಸಂದೇಶವಾಣಿ ಲಭಿಸುವ ಮತ್ತು ಪರಿಶುದ್ಧತೆಯ ಕೇಂದ್ರವಾಗಿರುತ್ತಾರೆ. ಆದುದರಿಂದ ಅವರನ್ನು ಅನುಸರಿಸಲಾಗುತ್ತಿದೆ. ಖಲೀಫರನ್ನು ಅನುಸರಿಸುವುದು ಏಕೆಂದರೆ ಅವರು ಅಲ್ಲಾಹನ ಸಂದೇಶವಾಣಿಗಳನ್ನು ಜಾರಿಗೊಳಿಸುವ ಮತ್ತು ಎಲ್ಲಾ ಸುವ್ಯವಸ್ಥೆಗಳ ಕೇಂದ್ರವಾಗಿರುತ್ತಾರೆ. ಎಂದರೆ ಪ್ರವಾದಿಗೆ ಲಭಿಸುವ ದೇವ ಸಂದೇಶವಾಣಿಗಳನ್ನು ಅನುಷ್ಠಾನ ರೂಪಕ್ಕೆ ತರುವವರು ಮತ್ತು ಪ್ರವಾದಿ ಸ್ಥಾಪಿಸಿದ ನಿಝಾಮನ್ನು ನೆಲೆನಿಲ್ಲಿಸುವವರು ಮತ್ತು ಚಲಾಯಿಸುವವರು ಖಲೀಫರಾಗಿರುತ್ತಾರೆ. ಆದುದರಿಂದ ಜ್ಞಾನಿಗಳಾದ ಜನರು ಹೇಳುತ್ತಾರೆ: ಪ್ರವಾದಿಗಳಿಗೆ ಇಸ್ಮತೆ ಕುಬ್ರಾ (ದೊಡ್ಡ ಚಾರಿತ್ರ್ಯ) ಮತ್ತು ಖಲೀಫರಿಗೆ ಇಸ್ಮತೆ ಸುಗ್ರಾ (ಚಿಕ್ಕ ಚಾರಿತ್ರ್ಯ) ಲಭಿಸಿರುತ್ತದೆ ಎಂದು. ಅದೇ ಮಸೀದಿಯಲ್ಲಿ (ಖಾದಿಯಾನಿನಲ್ಲಿ ಮುಸ್ಲಿಹ್ ಮೌಊದ್(ರ) ಖುತ್‌ಬ ನೀಡುತ್ತಿದ್ದರು ಅದೇ ಮಸೀದಿಯಲ್ಲಿ) ಇದೇ ವೇದಿಕೆಯ ಮೇಲೆ ಜುಮುಅದ ದಿವಸ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಿದ್ದರು: ನೀವು ನನ್ನ ವೈಯಕ್ತಿಕವಾದ ಕೆಲಸದಲ್ಲಿ ಏನಾದರೂ ತಪ್ಪನ್ನು ತೋರಿಸಿ ನಿಮ್ಮ ಮೇಲೆ ಹೊರಿಸಲಾದ ಅನುಸರಣೆಯಿಂದ ಹೊರಗೆ ಹೋಗಲಾರಿರಿ. ಏಕೆಂದರೆ ಯಾವ ಕೆಲಸಕ್ಕೋಸ್ಕರ ನಾನು ನಿಂತಿರುವೆನೋ ಅದು ಬೇರೆಯೇ ಆಗಿದೆ. ಅದು ಜಮಾಅತಿನ ನಿಝಾಮಿನ ಐಕ್ಯತೆ ಸ್ಥಾಪಿಸುವುದಾಗಿದೆ. ಆದುದರಿಂದ ನನ್ನ ಆಜ್ಞೆಗಳ ಪಾಲನೆ ಆವಶ್ಯಕವೂ ಅನಿವಾರ್ಯವೂ ಆಗಿದೆ. ಹೀಗೆ ಪ್ರವಾದಿಗಳ ಬಗ್ಗೆ ಅಲ್ಲಾಹ ಸುನ್ನತ್ ಆಗಿದೆ. ಮಾನವನ ದೌರ್ಬಲ್ಯಗಳಲ್ಲಿ ದೇವನ ಏಕತ್ವ ಮತ್ತು ಪ್ರವಾದಿತ್ವದ ನಡುವೆ ಇರುವ ವ್ಯತ್ಯಾಸವನ್ನು ವ್ಯಕ್ತಗೊಳಿಸುವುದಕ್ಕೆ ಅಲ್ಲಾಹನು ಹಸ್ತಕ್ಷೇಪ ಮಾಡುವುದಿಲ್ಲ. ಹೀಗೆ ಉಮ್ಮತ್ತಿನ ತರಬೇತಿ ಮಾಡುವುದಾಗಿರುತ್ತದೆ. ಉದಾಹರಣೆಗೆ ಸಜದ ಸಹು ಮರೆತರೆ ಮಾಡಲಾಗುತ್ತದೆ. ಇದರ ಉದ್ದೇಶವು ಉಮ್ಮತ್ತಿನವರು ತಪ್ಪು ಮಾಡಿದರೆ ಹೀಗೆ ಸಹು ಮಾಡಬೇಕೆಂಬ ಆಜ್ಞೆಯನ್ನು ತಿಳಿಸುವುದಾಗಿತ್ತು. ಏಕೆಂದರೆ ಇಂತಹ ತಪ್ಪು ಪ್ರವಾದಿಗಳಿಂದಲು ಸಾಧ್ಯ. ಪ್ರವಾದಿ(ಸ) ಅವರಿಂದಲೂ ಆದಾಗ ಅವರು ಸಜ್‌ದ ಸಹೂ ಅನುಷ್ಠಿಸಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಪ್ರವಾದಿಗಳ ಎಲ್ಲಾ ಕರ್ಮಗಳು ಅಲ್ಲಾಹನ ಸಂರಕ್ಷಣೆಗೆ ಪಾತ್ರವಾಗಿರುತ್ತವೆ. ಆದರೆ ಖಲೀಫರಿಗೆ ಸಂಬಂಧಿಸಿ ಅಲ್ಲಾಹನ ನಡೆವಳಿಕೆ ಹೇಗಿರುತ್ತದೆಂದರೆ ಜಮಾಅತಿನ ವ್ಯವಸ್ಥೆಯ ಅಭಿವೃದ್ಧಿಗೆ ಅವರು ಮಾಡುವ ಎಲ್ಲಾ ಕರ್ಮಗಳು ಅಲ್ಲಾಹನ ಸಂರಕ್ಷಣೆಗೆ ಪಾತ್ರವಾಗಿರುತ್ತವೆ. ಅವರು ಎಂದೂ ಜಮಾಅತ್‌ಗೆ ಕೆಡುಕು ಉಂಟಾಗುವಂತಹ ಮತ್ತು ಇಸ್ಲಾಮಿನ ಜಯವನ್ನು ಸೋಲಿಸುವಂತಹ ತಪ್ಪನ್ನು ಮಾಡಲಾರರು. ಅಥವಾ ಮಾಡಿದರೂ ಸಹ ಅದನ್ನು ಅವರು ಮುಂದುವರಿಸಲಾರರು. ಅವರು ಎಂದಾದರು ತಪ್ಪು ಮಾಡಿದರೆ ಅಲ್ಲಾಹನು ಅದನ್ನು ಸರಿಪಡಿಸುವ ಹೊಣೆಗಾರಿಕೆ ಸ್ವತಃ ವಹಿಸಿಕೊಂಡಿದ್ದಾನೆ. ಇದರ ಅರ್ಥ ಜಮಾಅತಿನ ನಿಝಾಮಿಗೆ ಸಂಬಂಧಿಸಿ ಖಲೀಫರ ಕರ್ಮಗಳಿಗೆ ಹೊಣೆಗಾರ ಖಲೀಫರಲ್ಲ, ಅಲ್ಲಾಹನೇ ಆಗಿದ್ದಾನೆ ಎಂದಾಗಿದೆ. ಆದುದರಿಂದ ಹೇಳಲಾಗುತ್ತಿದೆ ಅಲ್ಲಾಹನು ಖಲೀಫರನ್ನು ಸ್ವತಃ ನೆಲೆನಿಲ್ಲಿಸುತ್ತಾನೆ ಎಂದು. ಆದರೆ ಇದರ ಅರ್ಥ ಖಲೀಫ ಎಂದೂ ತಪ್ಪು ಮಾಡುವುದಿಲ್ಲ ಎಂದಲ್ಲ ಬದಲಿಗೆ ಒಂದು ವೇಳೆ ಅವರು ತಪ್ಪು ಮಾಡಿದರೂ ಅಲ್ಲಾಹನು ಅವರ ಕರ್ಮಗಳ ಮೂಲಕ ಅವರ ತಪ್ಪನ್ನು ತಿದ್ದುತ್ತಾನೆ. ಒಂದು ವೇಳೆ ಅವರ ಕರ್ಮಗಳಿಂದ ಅವರ ತಪ್ಪು ತಿದ್ದಲಿಲ್ಲ ಎಂದಾದರೆ ಈ ತಪ್ಪಿನ ಕೆಟ್ಟ ಪರಿಣಾಮಗಳನ್ನು ಬದಲಾಯಿಸುತ್ತಾನೆ. ಅಂದರೆ ಅದರ ಕೆಟ್ಟ ಪರಿಣಾಮಗಳನ್ನು ಕೆಟ್ಟದಾಗುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಪುನಃ ಹೇಳುತ್ತಾರೆ: ಖಲೀಫರು ಎಂದಾದರೂ ಬಾಹ್ಯವಾಗಿ ಮುಸ್ಲಿಮರಿಗೆ ಹಾನಿಕರವೆಂದು ತೋರುವ ತಪ್ಪನ್ನು

ಮಾಡಿದರೆ ಸಹ ಅಲ್ಲಾಹನು ಅತ್ಯಂತ ರಹಸ್ಯವಾಗಿ ಆ ತಪ್ಪಿನ ಪರಿಣಾಮಗಳನ್ನು ಬದಲಾಯಿಸುವನು ಮತ್ತು ಜಮಾಅತ್ ಅವನತಿಯ ಕಡೆಗೆ ಸಾಗುವುದಕ್ಕೆ ಪ್ರತಿಯಾಗಿ ಅಭಿವೃದ್ಧಿ ಕಡೆಗೆ ಹೆಜ್ಜೆ ಹಾಕುವುದು. ಆದರೆ ಪ್ರವಾದಿಗಳಿಗೆ ಇಸ್ಮತೆ ಕುಬ್ರಾ ಮತ್ತು ಇಸ್ಮತೆ ಸುಗ್ರಾ ಎಂಬ ಎರಡೂ ಲಭಿಸಿರುತ್ತದೆ. ಪ್ರವಾದಿಗಳು ಆಜ್ಞೆ ಜಾರಿಗೊಳಿಸುವ ವ್ಯವಸ್ಥೆ ಮತ್ತು ಜಮಾಅತಿನ ನಿಝಾಮಿನ ಕೇಂದ್ರವಾಗಿರುತ್ತಾರೆ. ಅವರು ದೇವ ಸಂದೇಶವಾಣಿ ಮತ್ತು ಪರಿಶುದ್ಧ ಕರ್ಮಗಳ ಕೇಂದ್ರವಾಗಿರುತ್ತಾರೆ. ಆದರೆ ಇದರ ಅರ್ಥ ಪ್ರತಿಯೊಬ್ಬ ಖಲೀಫ ಪರಿಶುದ್ಧ ಕರ್ಮಗಳ ಕೇಂದ್ರ ಆಗಬೇಕಾಗಿದೆ ಎಂಬುದಲ್ಲ. ಪರಿಶುದ್ಧ ಕರ್ಮಗಳಿಗೆ ಸಂಬಂಧಿಸಿದ ಕೆಲವು ಕೃತ್ಯಗಳಲ್ಲಿ ಅವರು ಬೇರೆ ಕೆಲವು ಸಂತರಿಗಿಂತ ಕಡಿಮೆ ಸ್ಥಾನದಲ್ಲಿರಲೂಬಹುದು. ಪರಿಶುದ್ಧ ಕರ್ಮಗಳ ಕೇಂದ್ರವಾಗಿರುವ ಮತ್ತು ಜಮಾಅತಿನ ನಿಝಾಮಿನ ಕೇಂದ್ರವೂ ಆಗಿರುವ ಖಲೀಫರು ಇರುವ ಹಾಗೆಯೇ, ಪರಿಶುದ್ಧತೆಯಲ್ಲೂ ದೇವ ಸಾಮೀಪ್ಯಕ್ಕೆ ಸಂಬಂಧಿಸಿಯೂ ಅನ್ಯರಿಗಿಂತ ಕಡಿಮೆ ಸ್ಥಾನದಲ್ಲಿರುವ ಖಲೀಫರೂ ಇರಬಹುದು. ಆದರೂ ಅವರು ಜಮಾಅತಿನ ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಅನ್ಯರಿಗಿಂತ ಮೇಲಿನ ಮಟ್ಟದಲ್ಲಿರಬಹುದು. ಆದರೆ ಪ್ರತಿಯೊಬ್ಬ ವ್ಯಕ್ತಿಯು ಪ್ರತಿಯೊಂದು ಸ್ಥಿತಿಯಲ್ಲಿ ಖಲೀಫರನ್ನು ಅನುಸರಿಸುವುದು ಫರ್ಝ್ ಆಗಿದೆ. ಏಕೆಂದರೆ ಜಮಾಅತಿನ ನಿಝಾಮ್ ಜಮಾಅತಿನ ರಾಜಕೀಯದೊಂದಿಗೆ ಸಂಬಂಧ ಹೊಂದಿದೆ

ಜಮಾಅತಿನ ರಾಜಕೀಯ ಎಂಬ ಪದವನ್ನು ಆಲಿಸಿ ಜನರು ಆತಂಕಗೊಂಡಿರಬಹುದು– ಜಮಾಅತಿ ರಾಜಕೀಯ ಅಂದರೆ ಏನೆಂದು? ಇಲ್ಲಿ ರಾಜಕೀಯ (ಸಿಯಾಸತ್) ಎಂದರೇನು? ನಮ್ಮಲ್ಲಿ ಸಾಮಾನ್ಯವಾಗಿ ರಹಸ್ಯವೆಂದು ತಿಳಿದುಕೊಂಡಿದ್ದಾರೆ ನಕಾರಾತ್ಮಕವಾದ ಅರ್ಥ ತೆಗೆದುಕೊಂಡಿದ್ದಾರೆ ಮತ್ತು ಅದನ್ನು ನಕಾರಾತ್ಮಕವಾಗಿ ಉಪಯೋಗಿಸಿದ್ದಾರೆ. ಕೆಲವು ರಾಜಕಾರಣಿಗಳು ಆ ಪದವನ್ನು ಕುಖ್ಯಾತಗೊಳಿಸಿದ್ದಾರೆ. ಅಂದರೆ ಅದನ್ನು ತಪ್ಪಾಗಿ ಬಿಂಬಿಸಿದ್ದಾರೆ. ಅದನ್ನು ಹಾನಿಗೊಳಿಸುವ ಅರ್ಥದಲ್ಲಿ ತಿಳಿಸುತ್ತಾರೆ ಆದರೆ ರಾಜಕೀಯ (ಸಿಯಾಸತ್) ಎಂಬ ಶಬ್ದದ ವಾಸ್ತವಿಕ ಅರ್ಥ ನಿಝಾಮನ್ನು ಚಲಾಯಿಸುವ ರೀತಿ ಎಂದಾಗಿದೆ. ಕೆಡುಕನ್ನು ತಡೆಯಲು ವ್ಯವಸ್ಥೆ ಮಾಡುವುದು, ಬುದ್ಧಿ ಮತ್ತು ಜಾಣ್ಮೆಯಿಂದ ಕೆಲಸ ನಿರ್ವಹಿಸುವುದು, ಅಂತರ್‍ರಾಷ್ಟ್ರೀಯ ವ್ಯವಹಾರಗಳನ್ನು ಸರಿಯಾದ ರೀತಿಯಲ್ಲಿ ಚಲಾಯಿಸುವ ಸಾಮರ್ಥ್ಯ ಹೊಂದುವುದು ಅಂದರೆ ಈ ಪದ ಎಲ್ಲಾ ರೀತಿಯಲ್ಲಿಯೂ ಸಕಾರಾತ್ಮಕ ವಿಷಯಗಳನ್ನು ಒಲಗೊಂಡಿದೆ– ವಾಸ್ತವಿಕ ಸಿಯಾಸತ್ ಇದೇ ಆಗಿದೆ. ಆದರೆ ನಾನು ಹೇಳಿದಹಾಗೆ ಅದೃಷ್ಟವಶಾತ್ ನಾವು ನಿಜವಾದ ಅರ್ಥವನ್ನು ಮರೆತು ರಾಜಕಾರಣಿಗಳ ಮಾತುಗಳನ್ನು ನಂಬಿದ್ದೇವೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಸಿಯಾಸತ್ ಎಂಬ ಶಬ್ದವನ್ನು ಗುಣಾತ್ಮಕವಾಗಿ ಬಳಸಿದ್ದಾರೆ.

ಅವರು ಹೇಳುತ್ತಾರೆ: ನಿಝಾಮ್ ಒಂದು ರೀತಿಯಲ್ಲಿ ಜಮಾಅತಿ ಸಿಯಾಸತ್‍ನೊಂದಿಗೆ ಸಾಕಷ್ಟು ಸಂಬಂಧ ಹೊಂದಿರುವುದರಿಂದ ಖಲೀಫರು ಜಮಾಅತಿನ ನಿಝಾಮನ್ನು ಉತ್ತಮ ರೀತಿಯಲ್ಲಿ ಇರಿಸುವವರಾಗಬೇಕು. ಧರ್ಮದ ಸ್ಥಿರತೆ ಮತ್ತು ಅದರ ಅರ್ಥಗರ್ಭಿತ ವ್ಯವಸ್ಥೆ ಸ್ಥಾಪಿಸುವುದರ ಬಗ್ಗೆಯೂ ಗಮನ ಹರಿಸಬೇಕು. ಈ ಕಾರಣದಿಂದ ಪವಿತ್ರ ಖುರ್‌ಆನ್‍ನಲ್ಲಿ ಖಿಲಾಫತ್ ಬಗ್ಗೆ ಪ್ರಸ್ತಾಪಿಸುವಾಗ ಅಲ್ಲಾಹನು ಹೀಗೆ ಹೇಳಿದ್ದಾನೆ:– **ವಲಯುಮಕ್ಕಿನನ್ನ ಲಹುಮ್ ದೀನಹುಮುಲ್ಲಧಿರ್‌ತಝಾ ಲಹುಮ್** – ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನು.

ಖಲೀಫರು ಮುಂದೆ ಇರಿಸುವ ಧರ್ಮ ಅಲ್ಲಾಹನ ಸಂರಕ್ಷಣೆಗೆ ಪಾತ್ರವಾಗಿರುತ್ತದೆ ಆದರೆ ಈ ಸಂರಕ್ಷಣೆ ಸುಗ್ರಾ (ಕಡಿಮೆ ಮಟ್ಟದ್ದು) ಆಗಿರುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆಂಶಿಕವಾಗಿ ಖಲೀಫರು ತಪ್ಪು ಮಾಡಲು ಸಾಧ್ಯವಿದೆ. ವಿವಿಧ ಖಲೀಫರ ಮಧ್ಯೆ ಅಭಿಪ್ರಾಯ ವ್ಯತ್ಯಾಸವೂ ಇರಬಹುದು. ಆದರೆ ಅವು ಅತ್ಯಂತ ಚಿಕ್ಕ ವಿಷಯಗಳಿಗೆ ಸಂಬಂಧಿಸಿರುತ್ತವೆ. ಉದಾಹರಣೆಗೆ ಕೆಲವು ವಿಷಯಗಳು ಹಝ್ರತ್ ಅಬುಬಕ್ಕರ್(ರ) ಹಾಗೂ ಹಝ್ರತ್ ಉಮರ್(ರ) ಅವರ ನಡುವೆ ಇದ್ದ ಭಿನ್ನಭಿಪ್ರಾಯಗಳು ಇಂದಿಗೂ ಉಮ್ಮತೆ ಮುಹಮ್ಮದಿಯಾದಲ್ಲಿ ಈ ಸಮಸ್ಯೆ ಬಗ್ಗೆ ಶ್ರದ್ಧೆವಹಿಸಲಿಲ್ಲ ಆದರೆ ಭಿನ್ನಭಿಪ್ರಾಯ ಕೇವಲ ಚಿಕ್ಕಪುಟ್ಟ ವಿಷಯಗಳಲ್ಲಿ ಸಂಬಂಧಿಸಿರುತ್ತದೆ. ಮೂಲ ತತ್ವಗಳಿಗೆ ಸಂಬಂಧಿಸಿ ಅವರ ಮಧ್ಯೆ ಯಾವ ಭಿನ್ನಾಭಿಪ್ರಾಯವೂ ಇರಲಾರದು. ಆದುದರಿಂದ ಬೈಅತ್ ಮಾಡಿದವನಿಗಿರುವ ಸ್ಥಾನದಲ್ಲಿ ಬೈಅತ್ ಮಾಡದವನೂ ಇರುತ್ತಾನೆ ಎಂದು ಹೇಳುವವನು ವಾಸ್ತವದಲ್ಲಿ ಬೈಅತ್ ಎಂದರೇನು, ಜಮಾಅತಿನ ನಿಝಾಮ್ ಎಂದರೇನು ಎಂದು ಮನವರಿಕೆ ಮಾಡದವನಾಗಿರುತ್ತಾನೆ.

ಸಲಹೆ ಕೇಳುವ ಬಗ್ಗೆಯೂ ನೆನಪಿಡಬೇಕಾದ ವಿಷಯವೇನೆಂದರೆ ಒಬ್ಬ ತಜ್ಞ ವ್ಯಕ್ತಿ ಅನ್ಯ ಧರ್ಮದವನಾಗಿದ್ದರೂ ಅವನಿಂದ ಸಲಹೆ ಪಡೆಯಬಹುದು. ಒಂದು ಮೊಕದ್ದಮೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಬ್ಬ ಆಂಗ್ಲೇಯ ವಕೀಲನನ್ನು ನೇಮಿಸಿದ್ದರು. ಅದರ ಅರ್ಥ ಅವರು ನುಬುವ್ವತ್‍ಗೆ ಸಂಬಂಧಿಸಿ ಅವರ ಸಲಹೆ ಪಡೆದರು ಎಂದಲ್ಲ. ಅಹ್ಝಾಬ್ ಯುದ್ಧವಾದಾಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಸಲ್ಮಾನ್ ಫಾರ್ಸಿ(ರ) ಅವರಿಂದ ಸಲಹೆ ಕೇಳಿದ್ದರು. ನಿಮ್ಮ ರಾಷ್ಟ್ರದಲ್ಲಿ ಯುದ್ಧದ ಸಂದರ್ಭದಲ್ಲಿ ಏನು ಮಾಡುತ್ತಾರೆ? ಎಂದು. ಅದಕ್ಕೆ ಅವರು ಉತ್ತರಿಸಿದರು ನಮ್ಮ ರಾಷ್ಟ್ರದಲ್ಲಿ ಖಂದಖ್ (ದೊಡ್ಡದಾದ ಗುಂಡಿ) ತೋಡಲಾಗುತ್ತದೆ. ಇದಕ್ಕೆ ರಸೂಲುಲ್ಲಾಹ್(ಸ) ಹೇಳಿದರು ಇದು ಉತ್ತಮವಾದ ಸಲಹೆ ಆಗಿದೆ. ತದನಂತರ ಖಂದಖ್ ತೋಡಲಾಯಿತು ಆದ್ದರಿಂದ ಇದನ್ನು ಖಂದಖ್ ಯುದ್ಧ ಎಂದು ಸಹ ಕರೆಯಲ್ಪಡುತ್ತಾರೆ. ಹೀಗೆ ನಾವು ಹಝ್ರತ್ ಸಲ್ಮಾನ್ ಫಾರ್ಸಿ(ರ) ಅವರನ್ನು ರಸೂಲುಲ್ಲಾಹ್(ಸ) ಅವರಿಗಿಂತ ಹೆಚ್ಚು ಯುದ್ಧದಲ್ಲಿ ಪರಿಣಿತಿ ಹೊಂದಿದ್ದರು ಎಂದು ಹೇಳಲು ಸಾಧ್ಯವಿಲ್ಲ. ಅವರು ಯುದ್ಧಗಳ ಕಲೆಗಳಲ್ಲಿ ಪ್ರವಾದಿ(ಸ) ಅವರಿಗಿಂತ ಹೆಚ್ಚು ಪರಿಣಿತಿ ಹೊಂದಿರಲಿಲ್ಲ ಅಥವಾ ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಮಾಡಿದ ಯೋಜನೆಗಳು ಹಝ್ರತ್ ಸಲ್ಮಾನ್ ಫಾರ್ಸಿ(ರ) ಮಾಡಲಿಲ್ಲ. ಅದಲ್ಲದೆ ಅವರನ್ನು ಯಾವುದೇ ಖಲೀಫರ ಕಾಲಘಟ್ಟದಲ್ಲಿ ಅಂದರೆ ಹಝ್ರತ್ ಸಲ್ಮಾನ್ ಫಾರ್ಸಿ(ರ) ಅವರನ್ನು ಎಂದೂ ಯಾವುದೇ ಸೈನಿಕರ ದಂಡನಾಯಕನನ್ನಾಗಿ ನೇಮಿಸಲಿಲ್ಲ. ಹೀಗೆ ಓರ್ವ ತಜ್ಞರ ಸಲಹೆ ಪಡೆದುಕೊಳ್ಳುವುದರಲ್ಲಿ ತಪ್ಪಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನ ಬಗ್ಗೆ ಹೇಳುತ್ತಾರೆ: ನಾನು ರೋಗಿಯಾಗಿದ್ದಾಗ ಆಂಗ್ಲೇಯ ಡಾಕ್ಟರ್‌ಗಳಿಂದ ಕೆಲವು ಸಲಹೆಗಳನ್ನು ಪಡೆಯುತ್ತೇನೆ. ಆದರೆ ಇದರ ಅರ್ಥ ನಾನು ಖಿಲಾಫತ್ ಬಗ್ಗೆಯೂ ಅವರಿಂದ ಸಲಹೆ ಪಡೆದೆನು ಎಂದಲ್ಲ. ನಾನು ಅದರ ಬಗ್ಗೆ ಅವರ ಸಲಹೆ ಕೇಳುತ್ತೇನೆ ಎಂದೂ ಅಲ್ಲ. ಅಥವಾ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹಾಬರಿಗೆ ಯಾವ ಸ್ಥಾನ ನೀಡಿದ್ದರೋ ಆ ಸ್ಥಾನವನ್ನು ನಾನು ಆ ಡಾಕ್ಟರ್‌ಗಳಿಗೆ ನೀಡುತ್ತೇನೆ ಎಂದೂ ಅದರ ಅರ್ಥವಲ್ಲ. ಆದುದರಿಂದ ಸಅದ್ ಬಿನ್ ಉಬಾದರಿಗಿದ್ದ ಯಾವುದಾದರೂ ಲೌಕಿಕ ನೈಪುಣ್ಯದ ಕಾರಣದಿಂದ ಅವರಿಂದ ಸಲಹೆ ಪಡೆಯಲಾಯಿತು ಎಂದು ಸಾಬೀತಾದರೂ ಸಹ ಅವರು ಖಲೀಫರ ಸಲಹೆಗಾರರ ಸಭೆಯಲ್ಲಿ ಸೇರಿದ್ದರು ಎಂದು ಸಾಬೀತಾಗುವುದಿಲ್ಲ. ಅವರು ಖಲೀಫರ ಸಲಹೆಗಾರರೊಂದಿಗೆ ಸೇರುತ್ತಿದ್ದರು ಎಂದು ಯಾವುದೇ ಸತ್ಯವಾದ ವರದಿ ಸಹ ಲಭಿಸಿಲ್ಲ. ವಾಸ್ತವಿಕವಾಗಿ ಅವರು ಮದೀನದಿಂದ ಸಿರಿಯಾದ ಕಡೆಗೆ ಹೋಗಿದ್ದರು. ಅವರ ಮೃತ್ಯುವಿನ ಬಗ್ಗೆ ಸಹಾಬರು ದೇವದೂತರು ಅಥವಾ ಜಿನ್ನ್‌ಗಳು ಅವರನ್ನು ಕೊಂದರು ಎಂದು ಹೇಳುತ್ತಿದ್ದರು. ಸಹಾಬರ ಅಭಿಪ್ರಾಯ ಪ್ರಕಾರ ಅವರ ಮೃತ್ಯು ಹೇಗೆ ಸಂಭವಿಸಿತೆಂದರೆ ಅಲ್ಲಾಹನು ತನ್ನ ವಿಶಿಷ್ಟವಾದೊಂದು ಕೃತ್ಯದಿಂದ ಅವರನ್ನು ಎತ್ತಿಬಿಟ್ಟು ಅವರು ಒಡಕಿಗೆ ಕಾರಣವಾಗದಂತೆ ಮಾಡಿದನು. ಏಕೆಂದರೆ ಅವರು ಬದರಿ ಸಹಾಬರಲ್ಲಿ ಒಬ್ಬರಾಗಿದ್ದರು. ಅವರ ಸ್ಥಾನಕ್ಕೆ ಭಂಗವುಂಟು ಮಾಡಬಹುದಾದ ಯಾವುದಾದರೂ ಕೆಲಸ ಅವರು ಮಾಡದಿರಲಿ ಎಂದು ಹಾಗೆ ಮಾಡಲಾಯಿತು. ಅಂತೂ ಅವರು ಬೇರ್ಪಟ್ಟವರಾಗಿದ್ದರು.

ಇದನ್ನು ಪ್ರಸ್ತಾಪಿಸಿದ ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹದೀಸಿನ ಈ ಎಲ್ಲಾ ವರದಿಗಳು ಸ್ಪಷ್ಟಪಡಿಸುವುದೇನೆಂದರೆ ಸಹಾಬರು ಅವರ ಬಗ್ಗೆ ಸಂತೃಪ್ತರಾಗಿರಲಿಲ್ಲ ಎಂದು. ಹಾಗಲ್ಲವಾದರೆ ಸಹಾಬರು ಅವರ ಬಗ್ಗೆ ಅವರು ದೇವದೂತರಿಂದ ಅಥವಾ ಜಿನ್ನ್‌ಗಳಿಂದ ಕೊಲ್ಲಲ್ಪಟ್ಟರೆಂದು ಯಾಕೆ ಹೇಳಲಾಯಿತು? ಬದಲಿಗೆ ಇಂತಹ ಕಠಿಣ ಪದಗಳಿಂದಲೂ ಹೆಚ್ಚಾಗಿ ಅವರು ಹೇಳಿದ್ದಾರೆ ಅದನ್ನು ನಾನು ನನ್ನ ನಾಲಿಗೆಯಿಂದ ಹೇಳಲು ಇಷ್ಟಪಡುವುದಿಲ್ಲ.

ಆದುದರಿಂದ ಒಬ್ಬನು ಖಿಲಾಫತಿನ ಬೈಅತ್ ಮಾಡದೆಯೂ ಇಸ್ಲಾಮೀ ನಿಝಾಮ್‍ನಲ್ಲಿ ತನ್ನ ಸ್ಥಾನ ಉಳಿಸಬಲ್ಲನು ಎಂಬ ಯೋಚನೆ ವಾಸ್ತವಿಕತೆಗೆ ಮತ್ತು ಇಸ್ಲಾಮೀ ತತ್ವಗಳಿಗೆ ಸಂಪೂರ್ಣ ವಿರುದ್ಧವಾಗಿದೆ. ಇಂತಹ ಯೋಚನೆ ಹೃದಯದಲ್ಲಿ ಹೊಂದಿರುವವನು ಬೈಅತ್‍ನ ಬಗ್ಗೆ ಸ್ವಲ್ಪವೂ ಅರಿತುಕೊಂಡಿಲ್ಲ ಎಂದು ನಾನು ಭಾವಿಸುತ್ತೇನೆ. (ಖುತ್‌ಬಾತೆ ಮಹ್‌ಮೂದ್ ಸಂಪುಟ–16, ಪುಟ–95–101, ಖುತ್‌ಬ ಜುಮುಅ 08–02–1935)

ಹಝ್ರತ್ ಸಅದ್ ಬಿನ್ ಉಬಾದ ಸಿರಿಯಾದ ಹೌರಾನ್‍ನಲ್ಲಿ ಹಝ್ರತ್ ಉಮರ್(ರ) ಖಲೀಫರಾಗಿ ಚುನಾಯಿಸಲ್ಪಟ್ಟು ಎರಡುವರೆ ವರ್ಷ ದಾಟಿದಾಗ ಮೃತರಾದರು. ಅಲ್ಲಾಮ ಇಬ್ನೆ ಹಜರ್ ಅಸ್ಖಲಾನ ಅವರ ಪ್ರಕಾರ ಅವರ ನಿಧನ ಸೀರಿಯಾದ ಬಸ್‌ರಾ ಎಂಬಲ್ಲಾಯಿತು. ಈ ಪಟ್ಟಣವೂ ಮುಸ್ಲಿಮರು ಸೀರಿಯಾದಲ್ಲಿ ಮೊಟ್ಟ ಮೊದಲನೇಯದಾಗಿ ಗೆದ್ದಿದ್ದರು. ಮದೀನದಲ್ಲಿ ಅವರ ನಿಧನದ ಸುದ್ದಿ ಹೇಗೆ ತಲುಪಿತು? ಒಂದು ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ ಮದೀನದಲ್ಲಿ ಬಿರೆ ಮುನಬ್ಬಿಹಯಾ ಇರೆಸಕುನ್‌ನ ಬಾವಿಯಿತ್ತು ಅದರಲ್ಲಿ ಮಧ್ಯಾಹ್ನ ಬೇಸಿಗೆಯ ಕಾಲದಲ್ಲಿ ಆ ಬಾವಿಯಲ್ಲಿ ತೆಗೆಯುವ ಹುಡುಗರಲ್ಲಿ ಓರ್ವ ಹುಡುಗ ಬಾವಿಯಲ್ಲಿ ಹೀಗೆ ಹೇಳಿದ್ದನ್ನು ಕೇಳಿದನು.

**ಕದ್‌ಕತಲ್‌ನ ಸಯ್ಯದಲ್ ಕರ್ಝ್‌ರಜಿ ಸಅದಬ್ನೆ ಉಬಾದ**
**ವರಮೈನಹು ಬಿಸಹ್ಮೈನಿ ಪಲಮ್ ನುಕ್‌ತಿ ಘಆದಹು**

ಅಂದರೆ ನಾವು ಖಝ್‌ರಜ್‌ನ ಸರದಾರರಾದ ಸಅದ್ ಬಿನ್ ಉಬಾದ(ರ) ಅವರನ್ನು ಕೊಂದು ಹಾಕಿದ್ದೆವು. ನಾವು ಅವರಿಗೆ ಎರಡು ಬಾಣವನ್ನು ಹೊಡೆದೆವು. ನಾವು ಅವರ ಹೃದಯದ ಮೇಲೆ ಹೊಡೆದಿದ್ದೆವು. ಆ ಉಡುಗರು ಭಯಭಿತರಾದರು ಮತ್ತು ಜನರು ಆ ದಿವಸವನ್ನು ನೆನಪಿನಲ್ಲಿಟ್ಟಿಕೊಂಡಿದ್ದರು. ಆ ದಿವಸವೇ ಹಝ್‌ರತ್ ಸಅದ್(ರ) ಅವರು ನಿಧನ ಹೊಂದಿದ ದಿವಸವಾಗಿತ್ತು. ಸಅದ್ ಕುಳಿತು ಮೂತ್ರ ಶಂಕೆ ಮಾಡುತ್ತಿದ್ದಾಗ ಅವರು ಕೊಲ್ಲಲ್ಪಟ್ಟರು. ಅವರು ಅಲ್ಲಿಯೇ ಮೃತರಾದರು. ಹಝ್‌ರತ್ ಸಅದ್ ಬಿನ್ ಉಬಾದ(ರ) ಅವರ ನಿಧನ ಹಝ್‌ರತ್ ಉಮರ್(ರ) ಅವರ ಖಿಲಾಫತ್ ಕಾಲಘಟ್ಟದಲ್ಲಾಯಿತು. ಅವರ ನಿಧನದ ವರ್ಷದಲ್ಲಿ ಭಿನ್ನಭಿಪ್ರಾಯವಿದೆ. ಕೆಲವರ ಪ್ರಕಾರ 14 ಹಿಜರಿ ಆಗಿತ್ತು ಮತ್ತೆ ಕೆಲವರ ಪ್ರಕಾರ 15 ಹಿಜರಿ ಆಗಿತ್ತು. ಇನ್ನು ಕೆಲವರ ಪ್ರಕಾರ 16 ಹಿಜರಿ ಆಗಿತ್ತು. ಹಝ್‌ರತ್ ಸಅದ್‌ರ ಗೋರಿ ಡಮಾಸ್ಕಸ್ ಸಮೀಪ ತಗ್ಗಾದ ಪ್ರದೇಶದಲ್ಲಿ ಮನೀಹ ಎಂಬ ಗ್ರಾಮದಲ್ಲಿದೆ. ಅತ್ತಬಖಾತುಲ್ ಕುಬ್ರದ ಇದು ಉಲ್ಲೇಖವಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–463, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2012, ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಇಬ್ನೆ ಹಜರ್ ಅಸ್ಖಲಾನಿ ಸಂಪುಟ–3, ಪುಟ–56, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005, ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್ ಭಾ–2, ಪುಟ–164, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2002)

ಇನ್ನು ನಾನು ಇಬ್ಬರು ನಿಧನ ಹೊಂದಿದವರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ ನಮಾಝ್ ಸಹ ಇನ್‌ಶಾಅಲ್ಲಾಹ್ ನಿರ್ವಹಿಸುವೆನು.

ಮೊದಲನೆಯ ಜನಾಝ ಮುಕರ್‍ರಮ್ ಸಯ್ಯಿದ್ ಮುಹಮ್ಮದ್ ಸರ್‌ವರ್ ಶಾಹ್ ಸಾಹಿಬ್ ಅವರದು. ಅವರು ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನ ಸದಸ್ಯರಾಗಿದ್ದರು. 2020 ಜನವರಿ ದಿನಾಂಕ 8ರಂದು 85ನೇ ವಯಸ್ಸಿನಲ್ಲಿ ಅವರು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಕೆಲವು ವರ್ಷಗಳಿಂದ ಕ್ಯಾಂಸರ್ ರೋಗ ಪೀಡಿತರಾಗಿದ್ದರು ಬಹಳ ಧೈರ್ಯದಿಂದ, ಸಹನೆಯಿಂದ ಅವರು ತಮ್ಮ ರೋಗವನ್ನು ಸಹಿಸಿಕೊಂಡರು. ಹೀಗೆ ಕೊನೆಯ ತನಕ ತಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸಲು ಪ್ರಯತ್ನಿಸುತ್ತಿದ್ದರು. ಅವರು ಒಡಿಶದ ಸೊಂಗ್‌ಡ ಪಟ್ಟಣದ ಒಂದು ನಿಷ್ಠಾವಂತ ಪ್ರಸಿದ್ಧ ಅಹ್ಮದಿ ಕುಟುಂಬಕ್ಕೆ ಸೇರಿದವರಾಗಿದ್ದರು. ತಾಯಿಯ ಕಡೆಯಿಂದ ಅವರ ಮುತ್ತಜ್ಜ ಹಝ್‌ರತ್ ಸಯ್ಯಿದ್ ಅಬ್ದುರ್ರಹೀಮ್ ಸಾಹಿಬ್‌ರವರು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಆಗಿದ್ದರು. ತಾಯಿಯ ಕಡೆಯಿಂದ ಅವರ ಅಜ್ಜ ಮುಕರ್‍ರಮ್ ಮೌಲವಿ ಅಬ್ದುಲ್ ಅಲೀಮ್ ಸಾಹಿಬ್ ಮರ್‌ಹೂಮ್ ಒಬ್ಬ ಮಹಾನ್ ವಿದ್ವಾಂಸರೂ ಕವಿಯೂ ಆಗಿದ್ದರು. ತಾವು ಜನಿಸಿದಾಗ ಅವರ ತಂದೆ ತಮ್ಮ ಮಾವನವರಲ್ಲಿ ಒಂದು ಹೆಸರು ಕೇಳಿದಾಗ ಅವರು ಹೇಳಿದರು. ನಾನು ಇಂದು ರಾತ್ರಿ ನನ್ನ ಸ್ವಪ್ನದಲ್ಲಿ ಹಝ್‌ರತ್ ಸರ್‌ವರ್ ಶಾಹ್ ಸಾಹೆಬ್ ಅವರು ನಮ್ಮ ಮನೇಗೆ ಆಗಮಿಸಿರುವುದಾಗಿ ಕಂಡೆನು. ಆದ್ದರಿಂದ ಅವರದ್ದೇ ಹೆಸರು ನೀಡಿರಿ ಎಂದು ಹೇಳಿದರು. ಹೀಗೆ ಅವರನ್ನು ಸಯ್ಯದ್ ಸರ್‌ವರ್ ಶಾಹ್ ಎಂದು ಹೆಸರಿಸಿದರು. ಪ್ರಾಥಮಿಕ ವಿದ್ಯಾಭ್ಯಾಸದ ನಂತರ ಅವರು ಕಟಕ್ ಜಿಲ್ಲೆಯಲ್ಲಿ ಬಿ.ಎ ಪದವಿ ಗಳಿಸಿದರು. ಅನಂತರ ಖಾಸಾಗಿ ಶಾಲೆಯಲ್ಲಿ ಮುಖ್ಯೋಪಾದ್ಯಾಯರಾಗಿ ಕೆಲಸ ಮಾಡಿದರು. ತದನಂತರ ಒಡಿಶಾ ನ್ಯಾಯಾಲಯದಲ್ಲಿ ಅಸಿಸ್ಟೆಂಟ್ ಆಗಿದ್ದರು. ಅನಂತರ ಆಡಿಟ್ ಆಫಿಸರ್‌ನ ಹುದ್ದೆಯಲ್ಲಿದ್ದರು. ಅನಂತರ ನಿವೃತ್ತಿ ಹೊಂದಿದ ನಂತರ 1995ರಲ್ಲಿ ಜಮಾಅತ್ತಿನ ಸೇವೆಗಾಗಿ ತಮ್ಮನ್ನು ಅರ್ಪಿಸಿದರು. ಹಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರು 1996ರಲ್ಲಿ ಕೆಲವು ಕೆಲಸಗಳು ಅವರಿಗೆ ವಹಿಸಿದರು. ಅವರು ಉಮ್‌ರಾ ಸಹ ಮಾಡಿದ್ದರು. ಕೇಂದ್ರದ ಆಡಿಟರ್ ಮತ್ತು ಅನೇಕ ಕಾರ್ಯಗಳಲ್ಲಿ ಒನ್ ಮ್ಯಾನ್ ಕಮೀಷನ್ ಆಗಿ ಹಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರು ಅವರನ್ನು ನೇಮಿಸಿದರು. ಹೀಗೆ ಅವರು ಕೊನೆಯವರೆಗೆ ಇದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ದಿವಂಗತರಿಗೆ 9ವರ್ಷಗಳ ಸುದೀರ್ಘ ಕಾಲ ಸದರ್ ಖಝಾ ಬೋರ್ಡ್ ಆಗಿ ಸೇವೆ ಸಲ್ಲಿಸಿದರು. ಅದೇ ರೀತಿ ಅವರು ಅನೇಕ ಮುಖ್ಯವಾದ ಕಮೀಟಿಗಳ ಅಧ್ಯಕ್ಷರಾಗಿಯು ಹಾಗೂ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು ಮತ್ತು ಕೊನೆಯವರೆಗೆ ಸದರ್ ಅಂಜುಮನ್ ಅಹ್ಮದಿಯಾದ ಸದಸ್ಯರಾಗಿರುವ ಸೌಭಗ್ಯ ಪಡೆದರು. ಆಡಳಿತದಲ್ಲಿ ಉತ್ತಮ ಸಾಮರ್ಥ್ಯ ಹೊಂದಿದ್ದರು. ಸುದೀರ್ಘ ಕಾಲ ಕೇಂದ್ರೀಯ ಆಡಿಟರ್ ಆಗಿ ಸೇವೆ ಸಲ್ಲಿಸಿದರು. ಹಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರ) ಒಂದು ಪತ್ರದಲ್ಲಿ "ನೀವು ಬಹಳಷ್ಟು ಕೆಲಸ ಮಾಡುತ್ತಿದ್ದೀರಿ ಜಝಾಕುಮುಲ್ಲಾಹು ತಅಲಾ ವ ಅಹ್‌ಸನಲ್ ಜಝಾ. ಯಾವುದೇ ಭಯವಿಲ್ಲದೆ ನೈಜ್ಯತೆಯನ್ನು ವ್ಯಕ್ತ ಪಡಿಸುವ ನಿಮ್ಮ ಗುಣ ಬಹಳ ಇಷ್ಟವಾಯಿತು. ಮಾಶಾ ಅಲ್ಲಾಹ್ ಬಹಳ ಸೂಕ್ಷ್ಮ ಹಾಗೂ ಮುಖ್ಯವಾದ ಭಾಗಗಳ ಮೇಲೆ ದೃಷ್ಠಿ ಹೋಗುತ್ತದೆ. ನೀವು ಇದೇ ರೀತಿ ತಮ್ಮ ಕಾರ್ಯಕ್ರಮಗಳ ಪ್ರಕಾರ ಕಾರ್ಯನಿರ್ವಹಿಸುತ್ತಾ ಇರಿ. ನಿಮ್ಮನ್ನು ಯಾರು ತಡೆಯುವುದಿಲ್ಲ ಅಲ್ಲಾಹನು ನಿಮಗೆ ಅರೋಗ್ಯ ನೀಡಲಿ ಮತ್ತು ನಿಮ್ಮ ವಯಸ್ಸಿನಲ್ಲಿ ಬರ್‌ಕತ್ ನೀಡಲಿ. (ಆ ಸಂದರ್ಭದಲ್ಲಿ ಅವರ ಆರೋಗ್ಯ ಹಾಗೂ ವಯಸ್ಸಿಗಾಗಿ ದುಆ ಮಾಡಿದ್ದರು)" ಎಂದು ಬರೆದಿದ್ದರು.

ಖಾದಿಯಾನಿನ ನಾಝಿಮ್ ಸಾಹೆಬ್ ದಾರುಲ್ ಖಝಾ ಹೇಳುತ್ತಾರೆ: ಖಝಾ ಕಛೇರಿಯ ಎಲ್ಲಾ ಕಾರ್ಯಕರ್ತರೊಂದಿಗೆ ಬಹಳ ಪ್ರೀತಿಯ ಸಂಬಂಧವಿತ್ತು. ಬೋರ್ಡಿನಲ್ಲಿ ಬರುವಂತಹ ಮೊಖದ್ದಮೆಗಳನ್ನು ಬೇಗ ನಿರ್ಣಯ ನೀಡಲು ಪ್ರಯತ್ನಿಸುತ್ತಿದ್ದರು. ದಿವಂಗತರು ಬಹಳ ಮುನ್ನೆಚ್ಚರಿಕೆಯಿಂದ ಫೈಲನ್ನು ಪರಿಶೀಲಿಸುತ್ತಿದ್ದರು. ನ್ಯಾಯದ ಮೇಲೆ ನಿರ್ಧಾರ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಭಿಪ್ರಾಯ ನೀಡುವುದರಲ್ಲಿ ಹಾಗೂ ಸೂಕ್ಷ್ಮವಾದ ಸಮಸ್ಯೆಗಳಲ್ಲಿ ಅಲ್ಲಾಹನಿಂದ ಸಹಾಯ ಯಾಚಿಸುತ್ತಿದ್ದರು.

ಡಾ॥ ತಾರಿಖ್ ಸಾಹೆಬ್ ಅವರ ಅಳಿಯ ಅಗಿದ್ದರು. ನೂರ್ ಆಸ್ಪತ್ರೆಯಲ್ಲಿ ಸೀನಿಯರ್ ಮೆಡಿಕಲ್ ಆಫಿಸರ್ ಆಗಿದ್ದಾರೆ. ಅವರು ಹೇಳುತ್ತಾರೆ ತಹಜ್ಜುದ್ ನಮಾಝ್ ಅನುಷ್ಠಾನವಲ್ಲದೆ ಮಸ್‌ಜಿದ್ ಮುಬಾರಕ್‌ನಲ್ಲಿ ನಮಾಝ್ಗಳನ್ನು ನಿರ್ವಹಿಸುತ್ತಿದ್ದರು. ಕೈಕಾಲು ತತ್ತರಿಸುತ್ತಿತ್ತು, ಸರಿಯಾಗಿ ನಡೆಯುತ್ತಿರಲಿಲ್ಲ ಆದರೂ ಬೇರೆಯವರ ಸಹಾಯದಿಂದ ಮಸೀದಿಗೆ ನಮಾಝ್ ನಿರ್ವಹಿಸಲು ಆಗಮಿಸುತ್ತಿದ್ದರು. ಜುಮುಆ ನಮಾಝಿನಲ್ಲಿ ಮೊದಲನೆಯ ಪಂಕ್ತಿಯಲ್ಲಿ ಕುಳಿತಿರುತ್ತಿದ್ದರು. ಮಗ್‌ರಿಬ್ ಹಾಗೂ ಇಶಾ ನಮಾಝಿನ ತನಕ ಮಸೀದಿಯಲ್ಲಿಯೆ ಕುಳಿತುಕೊಂಡು ನಫಿಲ್ ನಮಾಝ್ ಹಾಗೂ ದುಆದಲ್ಲಿ ನಿರತರಾಗುತ್ತಿದ್ದರು.

ಖಾದಿಯಾನಿನ ನಾಝಿರ್ ಆಲ ಬರೆಯುತ್ತಾರೆ. ಅವರ ಗುಣಲಕ್ಷಣಗಳ ಬಹಳಷ್ಟು ಇದ್ದವು. ಎಲ್ಲರೊಂದಿಗೆ ಬೆರೆಯುವ ಸ್ವಭಾವದವರಾಗಿದ್ದರು. ಆತಿಥೇಯರಾಗಿದ್ದರು. ಬಹಳ ಶ್ರಮವಹಿಸುವ ವ್ಯಕ್ತಿ ಆಗಿದ್ದರು. ಬಡವರೊಂದಿಗೆ ಸಹಾನುಭೂತಿ ತೋರುವವರಾಗಿದ್ದರು. ತಮ್ಮ ಮೇಲಧಿಕಾರಿಗಳ ವಿಧೇಯರಾಗಿದ್ದರು. ಖಿಲಾಫತ್‌ನೊಂದಿಗೆ ಬಹಳ ಆಳವಾದ ಸಂಬಂಧವಿತ್ತು ಅದೇ ರೀತಿ ಬೇರೆಯವರಿಗೂ ಖಿಲಾಪತ್‌ನೊಂದಿಗೆ ಸಂಬಂಧವಿರಿಸಲು ಕಿವಿಮಾತು ಹೇಳುತ್ತಿದ್ದರು. ಅಲ್ಲಾಹನ ಅನುಗ್ರಹದೊಂದಿಗೆ ಅವರು ಮೂಸಿ ಆಗಿದ್ದರು. ಅವರ ಎಲ್ಲಾ ಪುತ್ರರು ಹಾಗೂ ಪುತ್ರಿಯರು ಜಮಾಅತ್ತಿನ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಅವರ ಕಿರಿಯ ಪುತ್ರ ಸಯ್ಯದ್ ಮಹ್‌ಮೂದ್ ಅಹ್ಮದ್ ನೂರ್ ಆಸ್ಪತ್ರೆ ಖಾದಿಯಾನಿನಲ್ಲಿ ಫಾರ್‌ಮಸಿಷ್ಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಇಬ್ಬರು ಅಳಿಯಂದಿರು ಸಯ್ಯದ್ ತನ್ವೀರ್ ಅಹ್ಮದ್ ಸಾಹೆಬ್ ಮತ್ತು ಡಾ॥ ತಾರಿಖ್ ಅಹ್ಮದ್ ಸಾಹೆಬ್ ವಾಖಿಫೆ ಝಿಂದಗಿ ಆಗಿದ್ದಾರೆ. ಖಾದಿಯಾನಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅದೇ ರೀತಿ ಕಿರಿಯ ಅಳಿಯ ಸಯ್ಯದ್ ಹಸನ್ ಖಾನ್ ಸಾಹೆಬ್ ಅವರು ನಿವೃತ್ತಿ ಹೊಂದಿದ ನಂತರ ಜಮಾಅತ್ತಿನ ಸೇವೆ ಸಲ್ಲಿಸುತ್ತಿದ್ದಾರೆ.

ದಿವಂಗತ ಮಿರ್ಝ ವಸೀಮ್ ಅಹ್ಮದ್ ಸಾಹೆಬರು ನಾಝಿರ್ ಆಲ ಆಗಿದ್ದಾಗ ಗೌರವದ ಮಿತಿಯಲ್ಲಿದ್ದು ಆಡಿಟ್ ಮಾಡುತ್ತಿದ್ದರು ಮತ್ತು ಅವರೊಂದಿಗೆ ಅದರ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರು ಹೇಳುತ್ತಿದ್ದರು ಇಡೀ ಖಾದಿಯಾನಿನಲ್ಲಿ ಮಿಯಾಂ ಸಾಹೆಬ್ ಅವರ ಹಾಗೆ ಪ್ರೀತಿಸುವವರು ಯಾರು ಇರಲಿಲ್ಲ. ದಾರುಲ್ ಮಸೀಹ್‌ನಲ್ಲಿ ವಾಸವಾಗಿದ್ದರು ಹಝ್‌ರತ್ ಮಿಯಾಂ ಸಾಹೆಬ್ ಅವರನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಕೆಲವೊಮ್ಮೆ ಶಾಹ್ ಸಾಹೆಬ್ ಅವರ ಪ್ರೀತಿಯನ್ನು ನೆನಪಿಸಿಕೊಂಡು ಕಂಬನಿ ಸುರಿಸುತ್ತಿದ್ದರು. ಖಾದಿಯಾನಿನ ದರ್‍ವೇಶ್‌ಗಳನ್ನು ಬಹಳ ಗೌರವದಿಂದ ಕಾಣುತ್ತಿದ್ದರು. ಅವರು ಸ್ವತಃ ಬಹಳ ವಿಧೇಯತೆಯಿಂದ ಜೀವನ ಸಾಗಿಸಿದರು. ಜಾಮಿಯ ಅಹ್ಮದಿಯದ ವಿದ್ಯಾರ್ಥಿಗಳನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ವಿದ್ವಾಂಸರನ್ನು ಬಹಳ ಗೌರವಿಸುತ್ತಿದ್ದರು. ಅಲ್ಲಾಹನು ನಿಧನ ಹೊಂದಿದ ಈ ಮಹನೀಯರ ಪದವಿಗಳನ್ನು ಉನ್ನತಗೊಳಿಸುವವನಾಗಲಿ. ಅವರ ಮಕ್ಕಳು ಅವರ ಹೆಜ್ಜೆ ಗುರುತುಗಳಲ್ಲಿ ಸಂಚರಿಸುವ ಭಾಗ್ಯ ಗಳಿಸಲಿ.

ಎರಡನೆಯ ಜನಾಝ, ಮುಹ್ತರಮ ಶೌಕತ್ ಗೌಹರ್ ಸಾಹಿಬ ಅವರದು. ಅವರು ರಬ್ವದ ಡಾಕ್ಟರ್ ಲತೀಫ್ ಅಹ್ಮದ್ ಖುರೈಶಿಯವರ ಪತ್ನಿಯೂ ಮೌಲಾನ ಅಬ್ದುಲ್ ಮಾಲಿಕ್ ಖಾನ್ ಸಾಹಿಬರ ಪುತ್ರಿಯೂ ಆಗಿದ್ದರು. ಜನವರಿ ದಿನಾಂಕ 5ರಂದು 77ನೇ ವಯಸ್ಸಿನಲ್ಲಿ ರಬ್ವದಲ್ಲಿ ಅವರು ನಿಧನರಾದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. ಆಗ್ರದಲ್ಲಿ ಜನಿಸಿದರು ಆ ದಿನಗಳಲ್ಲಿ ಅವರ ತಂದೆ ಮೌಲಾನ ಅಬ್ದುಲ್ ಮಾಲಿಕ್ ಖಾನ್ ಸಾಹೆಬ್ ಅಲ್ಲಿ ಮುರಬ್ಬಿ ಆಗಿ ಸೇವೆ ಸಲ್ಲಿಸುತ್ತಿದ್ದರು. ಅನಂತರ ಇವರು ತಮ್ಮ ಪೋಷಕರೊಂದಿಗೆ ಹೈದ್ರಾಬಾದಿನಲ್ಲಿದ್ದರು. ಪಾಕಿಸ್ತಾನ ಖಾಯೆಮ್ ಆದನಂತರ ಕರಾಚಿಗೆ ವಲಸೆ

ಹೋದರು. ಅಲ್ಲಿ ಅವರು ಪ್ರಾಥಮಿಕ ವಿಧ್ಯಾಭ್ಯಾಸ ಪಡೆದರು. ವಿಧ್ಯಭ್ಯಾಸದಲ್ಲಿ ಬಹಳ ಚಾತುರ್ಯರಾಗಿದ್ದರು. ಬಹಳ ಚಿಕ್ಕ ವಯಸ್ಸಿನಂದ ಅವರು ಜಮಾಅತ್ತಿನ ಸೇವೆ ಮಾಡುವುದರಲ್ಲಿ ಆಸಕ್ತಿ ವಹಿಸಿದರು. ನಾಸಿರಾತಿನ ಸೆಕ್ರೇಟರಿ ಆಗಿದ್ದಾಗ ಕರಾಚಿಯ ನಾಸಿರಾತರನ್ನು ಮೊದಲನೇಯ ಪಂಕ್ತಿಗೆ ತಲುಪಿಸಿದರು. ತದನಂತರ 1961ರಲ್ಲಿ ಅವರ ನಿಕಾಹ್ ಡಾ॥ ಲತೀಫ್ ಖುರೈಶಿ ಅವರೊಂದಿಗೆ ಆದಾಗ ಅವರು ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ತದನಂತರ ಅವರು ಇಂಗ್ಲೆಂಡಿಗೆ ಹೋದಾಗ ಅವರೊಂದಿಗೆ ಇಲ್ಲಿಗೆ ಬಂದರು. ಇಲ್ಲಿ ಬಂದು ವಿದ್ಯಾಭ್ಯಾಸ ಮುಗಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಅವರಿಗೆ ವಿದ್ಯಾಭ್ಯಾಸ ಮುಗಿಸಿದುದರ ಬಗ್ಗೆ ಪತ್ರ ಬರೆದರು. ಆಗ ಅವರು ಪುನಃ ಪಾಕಿಸ್ತಾನದಲ್ಲಿ ಫಝ್ಲೆ ಉಮರ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಲು ಆದೇಶಿಸಿದರು. ಅಲ್ಲಿ ಅವರು ತುಂಬು ಹೃದಯದಿಂದ ತಮ್ಮ ಕುಟುಂಬದವರೊಂದಿಗೆ ರಬ್ವಹ್‌ದಲ್ಲಿ ಸೇವೆ ಪ್ರಾರಂಭಿಸಿದರು. ಅಲ್ಲಿ ಲಜ್ನದ ಬಹಳಷ್ಟು ಕೆಲಸಗಳು ಮಾಡಿದರು ಮತ್ತು ಅವರ ಕಾಲದಲ್ಲಿ ರಬ್ವಾಹ್‌ದ ನಿವಾಸಿಗಲ್ಲಿ ಪ್ರತಿಯೊಬ್ಬರು, ಮಹಿಳೆಯರು, ಬಾಲಕೀಯರೆಲ್ಲರು ಅವರ ಸೇವೆಯ ಬಗ್ಗೆ ತಿಳಿದಿದ್ದರು.

ನನ್ನ ತಾಯಿ ಸಾಹಿಬ್‌ಝಾದಿ ನಾಸಿರಹ್ ಬೇಗಮ್ ಸಾಹಿಬ ಅವರು ರಬ್ವದ ಲಜ್ನದ ಅಧ್ಯಕ್ಷೆಯಾಗಿದ್ದಾಗ ಅವರನ್ನು ಜನರಲ್ ಸೆಕ್ರೇಟರಿಯಾಗಿ ನೇಮಿಸಿದ್ದರು. 15ವರ್ಷಗಳ ಕಾಲ ಸತತವಾಗಿ ಆ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ಅವರು ಅವರಿಂದಲೇ ತರಬೇತಿ ಪಡೆದಿದ್ದರು. ಅನಂತರ ಅವರ ಆಡಳಿತದಲ್ಲಿ ಉತ್ತಮ ಸಾಮರ್ಥ್ಯ ಹೊಂದಿದ್ದರು. ಕೇಂದ್ರೀಯ ಕಾರ್ಯಕರ್ತರಲ್ಲಿ ಸೆಕ್ರೇಟರಿ ಆಗಿ ಸೇವೆ ಸಲ್ಲಿಸಿದರು. ಅನಂತರ ನಾನು ಅವರಿಗೆ ಪಾಕಿಸ್ತಾನದ ಕೇಂದ್ರೀಯ ಜನರಲ್ ಸೆಕ್ರೇಟರಿ ಆಗಿ ನೇಮಿಸಿದೆ. 6ವರ್ಷ ಅವರು ಸತತವಾಗಿ ಅಲ್ಲಿಯು ಉತ್ತಮವಾಗಿ ಕಾರ್ಯ ನಿರ್ವಹಿಸಿದರು. ಅವರು ತಮ್ಮ ಅನಾರೋಗ್ಯದ ಕಾರಣ ಲಜ್ನದ ಕಾರ್ಯ ನಿರ್ವಹಿಸುವುದನ್ನು ನಿಲ್ಲಿಸಿದ್ದರು. ಆದರೂ ಸಹ ಸಂದರ್ಭ ಒದಗಿ ಬಂದಾಗ ಅವರು ಸೇವೆ ನೀಡುತ್ತಿದ್ದರು. ಸತತವಾಗಿ 50 ವರ್ಷಗಳ ಕಾಲ ಜಮಾಅತ್ತಿನ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದಿದ್ದರು. ಪ್ರತಿಯೋರ್ವ ಮಹಿಳೆ ಮತ್ತು ಬಾಲಕೀಯರು ಅವರ ಒಳ್ಳೆಯ ಗುಣಗಳನ್ನು ನೆನಪಿಸಿಕೊಳ್ಳುತ್ತಿದ್ದರು. ನೆರೆಹೊರೆಯವರೊಂದಿಗೆ ಪ್ರೀತಿಯ ವರ್ತನೆ, ಬಡವರಿಗೆ ಸಹಾಯ ಮಾಡುವುದು, ಆತಿಥ್ಯ, ಚಂದಗಳನ್ನು ಖಡ್ಡಾಯವಾಗಿ ಪಾವತಿಸುವುದು ಇವೆಲ್ಲವೂ ಇವರ ವಿಶೇಶ ಗುಣಗಳಾಗಿದ್ದವು. ಈ ವರ್ಷ ವಕ್ಫೇ ಜದೀದಿನ ಘೋಷಣೆ ಆದ ಕೂಡಲೆ ಅವರು ತಮ್ಮ ಚಂದವನ್ನು ಪಾವತಿಸಿದರು. 5ನೇ ತಾರೀಖಿಗೆ ಅವರು ನಿಧನ ಹೊಂದಿದರು 1ನೇಯ ತಾರೀಖಿಗೆ ಘೋಷಣೆ ಆಗಿತ್ತು.

ಡಾ॥ ಖುರೇಶಿ ಸಾಹೆಬರು ಬರೆಯುತ್ತಾರೆ 50ವರ್ಷಗಳ ದಾಂಪತ್ಯದಲ್ಲಿ ಅವರು ಉತ್ತಮ ಮಡದಿ, ಉತ್ತಮ ತಾಯಿ, ಉತ್ತಮ ಸಹೋದರಿ ಹಾಗೂ ಉತ್ತಮ ಪುತ್ರಿ ಆಗಿದ್ದರು. ಒಂದು ಮಾತು ಇಲ್ಲಿ ಬರೆಯುವವರು ಅಥವಾ ಡಾಕ್ಟರ್ ಸಾಹೆಬರು ಬರೆಯಲು ಮರೆತಿದ್ದಾರೆ ಅವರು ಉತ್ತಮ ಸೋಸೆ ಸಹ ಆಗಿದ್ದರು. ಅವರ ಅತ್ತೆ ಹಾಗೂ ಮಾವ ಅವರೊಂದಿಗಿದ್ದರು ಇಗಲೂ ಸಹ ಅವರೊಂದಿಗಿದ್ದಾರೆ ಅವರನ್ನು ಸಹ ಇವರು ತನ್ನ ಸ್ವಂತ ತಂದೆ ತಾಯಿಯ ಹಾಗೆ ನೋಡಿ ಕೊಂಡಿದ್ದರು. ಅವರ ಸೇವೆ ಮಾಡುತ್ತಿದ್ದರು. ಅನಾರೋಗ್ಯದಲ್ಲಿಯು ಸಹ ಸೇವೆ ಮಾಡುತ್ತಿದ್ದರು. ಒಟ್ಟಿನಲ್ಲಿ ಅವರು ಒಂದು ಉತ್ತಮ ಮಾದರಿಯಾಗಿ ಜೀವನ ಸಾಗಿಸಿದ ನಂತರ ನಿಧನ ಹೊಂದಿದರು. ಸುದೀರ್ಘ ಕಾಲದಿಂದ ಅನಾರೋಗ್ಯವಾಗಿದ್ದರು. ಆದರೂ ಮನೆ ಕೆಲಸಗಳಲ್ಲಿ ಆಸಕ್ತಿ ವಹಿಸುತ್ತಿದ್ದರು. ಅನರೋಗ್ಯವಿದ್ದರು ಎಂದೂ ದೋಷಾರೋಪಣೆ ಮಾಡಲಿಲ್ಲ. ಅನಾರೋಗ್ಯವನ್ನು ಬಹಳ ಸಹನೆಯಿಂದ ಸಹಿಸಿಕೊಂಡರು. ಖಿಲಾಫತ್‌ನೊಂದಿಗೆ ಬಹಳ ಆಳವಾದ ಸಂಬಂಧ ಹೊಂದಿದ್ದರು.

ಅವರು ಪತಿ ಡಾ॥ ಲತೀಫ್ ಖುರೈಶಿ ಸಾಹೆಬರಲ್ಲದೆ ಮೂರು ಪುತ್ರಿಯರು ಹಾಗೂ ಇಬ್ಬರು ಪುತ್ರರನ್ನು ಅಗಲಿ ಹೋಗಿದ್ದಾರೆ, ಓರ್ವ ಪುತ್ರಿ ಡಾಕ್ಟರ್ ಆಗಿದ್ದಾರೆ. ಎಲ್ಲರೂ ವಿದ್ಯಾವಂತರಾಗಿದ್ದರು. ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಅವರಿಗೆ ವಿದ್ಯಾಭ್ಯಾಸ ಮಾಡಿಸಿದರು. ಅವರ ಓರ್ವ ಪುತ್ರಿ ಅವರಿಗೆ ಒಮ್ಮೆ ಹೇಳಿದರು: ನೀವು ಎಂದೂ ಆಭರಣಗಳು ಧರಿಸಲಿಲ್ಲ ಮತ್ತು ಒಳ್ಳೆಯ ಉಡುಪುಗಳ ಪಡೆಯಲಿಲ್ಲ. ಅದಕ್ಕೆ ಅವರು ಉತ್ತರಿಸಿದರು ನಿಮಗೆ ಒಳ್ಳೆಯ ವಿದ್ಯೆ ಕಲಿಸಿದರೆ ಅದೇ ನನಗೆ ಒಳ್ಳೆಯ ಆಭರಣ ಹಾಗೂ ಒಳ್ಳೆಯ ಉಡುಪಾಗಿದೆ. ನೀವೆಲ್ಲರೂ ಒಳ್ಳೆಯ ವಿದ್ಯಾಭ್ಯಾಸ ಪಡೆದು ಜಮಾಅತ್ತಿಗೆ ಒಂದು ಉತ್ತಮ ಸದಸ್ಯರಾದರೆ ಸಾಕು.

ಬಹಳ ನಿಜವಾದ ಸ್ವಪ್ನಗಳು ಕಾಣುವವರಾಗಿದ್ದರು. ಅವರ ಅನೇಕ ಸ್ವಪ್ನಗಳು ಪೂರ್ಣಗೊಂಡಿವೆ. ಓರ್ವ ಪುತ್ರಿಯ ಪ್ರವೇಶಾತಿಯ ಸಂದರ್ಭದಲ್ಲಿ ಅವರಿಗೆ ಹೇಳಿದರು ನಿಮಗೆ ಈ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶಾತಿ ಸಿಗುವುದು, ನಾನು ಇದರ ಬಗ್ಗೆ ಸ್ವಪ್ನ ಕಂಡಿದ್ದೇನೆ. ತದನಂತರ ಅವರಿಗೆ ಆ ಕಾಲೇಜಿನಲ್ಲಿಯೇ ಪ್ರವೇಶಾತಿ ಲಭಿಸಿತು. ಹೀಗೆ ಅವರ ಅನೇಕ ಸ್ವಪ್ನಗಳು ಪೂರ್ಣಗೊಂಡಿದೆ. ಅಲ್ಲಾಹನ ಅನುಗ್ರಹದಿಂದ ಅವರು ಬಹಳ ಉತ್ತಮ ಸ್ವಭಾವದವರಾಗಿದ್ದರು.

ಅವರ ಪುತ್ರ ಅಬ್ದುಲ್ ಮಾಲಿಕ್ ಸಾಹೆಬ್ ಹೇಳುತ್ತಾರೆ ಜಮಾಅತ್ತಿನ ಸೇವೆ ಸತತವಾಗಿ ಮಾಡುತ್ತಿದ್ದರು. ಕೆಲವೊಮ್ಮೆ ಲಜ್ನದ ಕಛೇರಿಯಿಂದ ದಾರುಲ್ ಉಲೂಮಿನವರೆಗೆ ಬೇಸಿಗೆ ಕಾಲದಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಎಂದೂ ಇದರ ಬಗ್ಗೆ ದೂರು ನೀಡಲಿಲ್ಲ ಅದೇ ರೀತಿ ಈ ಸಂದರ್ಭದಲ್ಲಿ ಯಾವಾಗಲೂ ತನ್ನ ನೆರೆಹೊರೆಯವರಿಗೆ ಸಿಹಿ ಕಳುಹಿಸುತ್ತಿದ್ದರು. ಮತ್ತು ಅವರು ಹೇಳುತ್ತಿದ್ದರು ನಾವು ದೀನಿನ ವಿಷಯದಲ್ಲಿ ಬೇರೆಯವರೊಂದಿಗೆ ಸಂಬಂಧ ಇರಿಸಿಕೊಂಡಾಗ ಅಲ್ಲಾಹನು ನಮ್ಮನ್ನು ಎಂದೂ ವ್ಯರ್ಥಗೊಳಿಸುವುದಿಲ್ಲ.

ಅವರ ಓರ್ವ ಪುತ್ರಿ ಹೇಳುತ್ತಾರೆ ಮದುವೆಯ ನಂತರ ನನಗೆ ಮಕ್ಕಳಾದಾಗ ಇವರೆಲ್ಲರು ಅಮೇರಿಕದಲ್ಲಿರುತ್ತಿದ್ದರು ಆದ್ದರಿಂದ ಅವರು ನನಗೆ ಪ್ರತಿಸಲ ಹೇಳುತ್ತಿದ್ದರು ಅಮೇರಿಕ ಮತ್ತು ಬೇರೆ ರಾಷ್ಟ್ರಗಳ ಸಮಾಜದಲ್ಲಿ ಬಹಳ ಕಡೆಕು ಇರುವುದರಿಂದ ಅವರೊಂದಿಗೆ ಪ್ರೀತಿಯ ಸಂಬಂಧ ಇರಿಸಲು ಹೇಳುತ್ತಿದ್ದರು. ಮನೆಯ ವಾತಾವರಣ ಸುಂದರವಾಗಿರಿಸಿರಿ ಹೀಗೆ ಅವರ ಮನಸ್ಸು ಮನೆಯಲ್ಲಿರುವುದು. ಅವರೆಲ್ಲರು ಹೊರ ಹೋಗುವುದಕ್ಕಿಂತ ಹೆಚ್ಚು ಮನೆಯಲ್ಲಿರಲು ಇಚ್ಚಿಸುವರು.

ಮತ್ತು ಅವರು ಹೇಳುತ್ತಾರೆ ಮೆಡಿಕಲ್ ಕಾಲೇಜಿನಲ್ಲಿ ಒಮ್ಮೆ ವಿದ್ಯಾರ್ಥಿನಿಯರು ನನ್ನನ್ನು ವಿರೋಧಿಸಿದರು. ಅಹ್ಮದಿ ಆಗಿದ್ದರಿಂದ ನನನ್ನು ಬಹಿಷ್ಕರಿಸಿದರು. ನಾನು ನನ್ನ ತಾಯಿಗೆ ಫೋನ್ ಮಾಡಿ ಇದರ ಬಗ್ಗೆ ತಿಳಿಸಿ ಅಳಲು ಪ್ರಾರಂಭಿಸಿದೆ. ಅದಕ್ಕೆ ಬಹಳ ಉತ್ತಮ ರೀತಿಯಲ್ಲಿ ನನಗೆ ಬುದ್ಧಿವಾದ ಹೇಳಿದರು. ಅವರು ಹೇಳಿದರು ಇದರಲ್ಲಿ ಅಳುವುದೇನದೆ. ಇದು ಪ್ರವಾದಿಗಳ ಸುನ್ನತ್ ಅಗಿದೆ. ಅದರ ಮೇಲೆ ನಿನಗೆ ನಡೆಯಲು ಅವಕಾಶ ಲಭಿಸುತ್ತಿದೆ. ಮತ್ತೆ ಹೇಳಿದರು ಬೆರೆದಿಟ್ಟಕೋ ಅಹ್ಮದಿಯ್ಯತ್ತಿನ ಕಾರಣದಿಂದ ನಿನಗೆ ಯಾವುದಾದರು ತೊಂದರೆ ಆದಾಗ ಅಲ್ಲಾಹನು ನನಗೆ ಎಂದೂ ವ್ಯರ್ಥ ಗೊಳಿಸುವುದಿಲ್ಲ. ಪರೀಕ್ಷೆಯಲ್ಲಿ ಉತ್ತೀರ್ಣವಾಗುತ್ತೀಯ ಎಂದು. ಅದಕ್ಕೆ ಅವರು ಹೇಳುತ್ತಾರೆ ನಾನು ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿ ಉತ್ತೀರ್ಣಳಾದೆ ಆದರೆ ನನ್ನನ್ನು ವಿರೋಧಿಸಿದ ಅನ್ಯ ಹುಡುಗಿಯರೆಲ್ಲರು ಅನುತ್ತೀರ್ಣರಾದರು.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು ಅವರ ಹೆಜ್ಜೆ ಗುರುತಲ್ಲಿ ಚಲಿಸುವ ಭಾಗ್ಯ ಗಳಿಸಲಿ. ಸಾತ್ವಿಕರೂ ಧರ್ಮಕ್ಕೆ ಸೇವೆ ಮಾಡುವವರೂ ಖಿಲಾಫತ್‌ನೊಂದಿಗೆ ಯಾವಾಗಲೂ ನಿಷ್ಠಾವಂತ ಸಂಬಂಧ ಸ್ಥಾಪಿಸುವವರೂ ಆಗಲಿ – ಆಮೀನ್.

---

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ ಮುಂದು ವರಿಸಲಾಗಿದೆ)*

ಅನಂತರ ಅಲ್ಮಿಗ್ರೆ ಸಿಟಿ ಕೌನ್ಸಿಲ್‌ನಲ್ಲಿ ಒಂದು ರಾಜಕೀಯ ಪಕ್ಷ "Respect Almere" ದ ಚೇರ್‌ಮನ್ Mr. Rene Eekhuisರು ತಮ್ಮ ಪರಿಚಯ ನೀಡುತ್ತಾ ಹೇಳಿದರು. ನಿಮ್ಮೆಲ್ಲರ ಮೇಲೆ ಶಾಂತಿ ಇರಲಿ, ನಮ್ಮ ರಾಜಕೀಯ ಪಕ್ಷದ ಉದ್ದೇಶದನ್ವಯ ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಇದೆ. ಇದರಲ್ಲಿ ಮುಸಲ್ಮಾನರೂ ಒಳಗೊಂಡಿದ್ದಾರೆ. ಅಲ್ಮಿರೆದಲ್ಲಿ ಇನ್ನೊಂದು ಮಸೀದಿಯೂ ಇದೆ. ಅದರಲ್ಲಿ ಮಕ್ಕಳಿಗೆ ದ್ವೇಷಭಾವನೆಯನ್ನು ಕಲಿಸಲಾಗುತ್ತದೆ. ನಾವು ಈ ಮಸೀದಿಯನ್ನು ಬಂದ್ ಮಾಡಬಯಸುತ್ತೇವೆ. ಕೆಲ ತಿಂಗಳ ಹಿಂದೆ ನಿಮ್ಮ ಮಸೀದಿಯ ವತಿಯಿಂದ ನಮಗೆ ಆಮಂತ್ರಣ ಸಿಕ್ಕಿತು. ಅದು ನಾವು ಸ್ವೀಕರಿಸಿದೆವು. ನಾನು ನಮ್ಮ ಪಕ್ಷದ ಮುಕಂಡರಾದ Gerdwin cammers ರೊಂದಿಗೆ ಈ ಮಸೀದಿಯನ್ನು ಸಂದರ್ಶಿಸಿದೆವು. ನಮ್ಮ ಪಕ್ಷವು ಎಲ್ಲರಿಗೂ ಮರ್ಯಾದೆ ಕೊಡಬಯಸುತ್ತದೆ. ತಮ್ಮ ಸ್ಥಳೀಯ ಇಮಾಮ್ ಸಫೀರ್ ಸಿದ್ದೀಖಿ ಸಾಹಿಬ್ ಇದನ್ನೆ ಮಾಡುತ್ತಿದ್ದಾರೆ. ನಮ್ಮ ಪಕ್ಷದ ದೃಷ್ಟಿಯಲ್ಲಿ ಈ ತರಹ ಪರಸ್ಪರ ಕೊಡುವುದರಿಂದ ಒಬ್ಬರು ಇನ್ನೊಬ್ಬರಿಗೆ ತಿಳಿಯುವ ಅವಕಾಶ ದೊರೆಯುತ್ತದೆ. ನಿಮ್ಮ ಜಮಾಅತಿನ ಇಲ್ಲಿಯ ಇಮಾಮರು ವಿಚಾರ ವಿನಿಮಯಕ್ಕಾಗಿ ಯಾವಾಗಲೂ ಸಿದ್ಧರಾಗಿರುತ್ತಾರೆ. ಆ ಕಾರಣದಿಂದಲೇ ಅಹ್ಮದಿಯಾ ಜಮಾಅತಿನವರಿಗೆ ಸ್ವಾಗತವಿದೆ. ನಮ್ಮ ಪಕ್ಷದ ದೃಷ್ಟಿಯಲ್ಲಿ ನಿಮ್ಮ "ಪ್ರೀತಿ ಎಲ್ಲರಲ್ಲೂ ದ್ವೇಷವಿಲ್ಲ ಯಾರಲ್ಲೂ" ಘೋಷಣೆ ಅತ್ಯುತ್ತಮವಾಗಿದೆ. ಅಲ್ಮಿರೆಯಲಿ ಮಸೀದಿ ನಿರ್ಮಾಣ ಮಾಡಿದಕ್ಕೆ ನಾವು ನಿಮಗೆ ಶುಭ ಕೋರುತ್ತೇವೆ. ನಿಮಗೆಲ್ಲರಿಗೂ ಧನ್ಯವಾದಗಳು.

ಅನಂತರ ಸಿಖ್ ಸಮುದಾಯದ ಮುಖಂಡರೊಬ್ಬರು Blupimder singh ತಮ್ಮ ಪರಿಚಯ ನೀಡುತ್ತಾ ಹೇಳಿದರು. ನಾನು ಹಾಲೆಂಡಿನ ಸಿಖ್ ಸಮುದಾಯದ ವತಿಯಿಂದ ಈ ಪವಿತ್ರ ದಿನದಂದು ನಿಮಗೆಲ್ಲರಿಗೂ ಶುಭ ಕೋರುತ್ತೇನೆ. ನಾನು ನಿಮ್ಮ ಕೇಂದ್ರವಾದ ಖಾದಿಯಾನಿಗೂ ಹೋಗಿದ್ದೆ. ಅಲ್ಲಿ ನನಗೆ ಅತ್ಯಂತ ಹೆಚ್ಚಿನ ಮರ್ಯಾದೆಯನ್ನು ನೀಡಿದರು. ಇಲ್ಲಿಯೂ

ಅಹ್ಮದಿಯಾ ಜಮಾಅತಿನ ಜನರಿಗೆ ಅದೇ ರೀತಿ ವ್ಯವಹರಿಸಿದ್ದನ್ನು ಕಾಣುತ್ತಿದ್ದೇವೆ. ಈ ಜನರು ಪವಿತ್ರ ಖುರ್‌ಆನಿನ ಅನುವಾದಗಳನ್ನು ಮಾಡುತ್ತಿದ್ದಾರೆ. ಹಿಂದೆ ಮಾನವಕುಲಕ್ಕೆ ಅಲ್ಲಾಹನ ಸಂದೇಶವನ್ನು ತಲುಪಿಸುತ್ತಿದ್ದಾರೆ. ಅದು ಶಾಂತಿ ಸ್ಥಾಪನೆಗಾಗಿ ಮತ್ತು ಯಾರನ್ನು ದ್ವೇಷಿಸದಿರಲು ಮತ್ತು ಎಲ್ಲ ಧರ್ಮದವರೊಂದಿಗೂ ಸದ್ವರ್ತನೆಯ ಸಂದೇಶವನ್ನು ನೀಡುತ್ತಿದ್ದಾರೆ. ಆದ್ದರಿಂದ ನಾನು ಇಲ್ಲಿ ಅಲ್ಮಿರೆಯಲ್ಲಿ ಮತ್ತು ಹಾಲೆಂಡಿನಲ್ಲಿ ನಿಮಗೆಲ್ಲರಿಗೂ ಮನಪೂರ್ವಕವಾಗಿ ಅಭಿನಂದಿಸುತ್ತೇನೆ. ನಾನು ಇನ್ನೊಮ್ಮೆ ನಿಮಗೆ ಶುಭ ಕೋರುತ್ತೇನೆ. ನನ್ನ ಮನಸ್ಸಿನಲ್ಲಿ ಹುಝೂರ್(ಅ.ಬಿ.ಅ.) ರವರ ಬಗ್ಗೆ ತುಂಬಾ ಶ್ರದ್ಧೆ ಇದೆ. ಅವರು ಇಂಗ್ಲೆಂಡಿನಿಂದ ಇಲ್ಲಿಗೆ ಆಗಮಿಸಿದ್ದಾರೆ. ನನಗೆ ನನ್ನ Socialist party ಯ ಮಿತ್ರರಾದ Mr. Bomel ಮತ್ತು ಇವರ ಕೌನ್ಸಿಲರ್‌ಗಳ ಜೊತೆ ಹುಝೂರ್(ಅ.ಬಿ.ಅ.) ರೊಂದಿಗೆ ಎರಡು ಸಲ ಭೇಟಿಯಾಗುವ ಭಾಗ್ಯ ಲಭಿಸಿದೆ.

ಆದ್ದರಿಂದ ಇಂದು ಅಲ್ಮಿರೆ ಮಸೀದಿಗೆ ಬಂದು ನೋಡಿದಕ್ಕೆ ತುಂಬ ಸಂಕಷ್ಟದಿದ್ದೇನೆ. ನಮ್ಮ ಸಿಖ್ ಸಮುದಯವು ಅಂತರ ಧರ್ಮಿಯರೊಂದಿಗೆ ಚರ್ಚಿಸುವುದರಲ್ಲಿ ನಂಬಿಕೆ ಹೊಂದಿದೆ ಮತ್ತು ನಾವು ನಮ್ಮ ಧರ್ಮದ ನಮ್ಮ ಕಾರ್ಯಕ್ರಮದಲ್ಲಿ ನಿಮ್ಮ ಜಮಾಅತಿಗೆ ಆಮಂತ್ರಿಸಿದೆವು. ಅವರು ನಮಗೆ ತಿಳಿಯದಂತಹ ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದರು. ನಮಗೆ ತಿಳಿಯಿತು. ನೀವು ಸಹ ಏಕದೇವನ ಮೇಲೆ ವಿಶ್ವಾಸ ಹೊಂದಿದವರಾಗಿದ್ದೀರಿ. ಅವನೇ ನಮ್ಮ ನಿಜವಾದ ಸೃಷ್ಟಿಕರ್ತನು. ಬೇರೆ ಜಾತಿಪಾತಿ ಯಾವುದಿಲ್ಲ. ಎಲ್ಲರಿಗಾಗಿ ಒಂದೇ ರೀತಿಯ ಪ್ರೀತಿ ಇದೆ. ಆ ಕಾರಣದಿಂದಲೇ ಸಿಖ್ ಸಮುದಾಯದವರ ಹೃದಯಗಳಲ್ಲಿ ನಿಮಗೆ ಉತ್ತಮ ಸ್ಥಾನವಿದೆ. ನಾವು ಮತ್ತೊಮ್ಮೆ ನಿಮಗೆ ಶುಭ ಕೋರುತ್ತೇವೆ.

ಅನಂತರ ಅಮೀರ್ ಸಾಹಿಬರು ಹಾಲೆಂಡ್ ತಮ್ಮ ಪರಿಚಯಿಸುತ್ತಾ ಹೇಳಿದರು. ಸಂಕ್ಷಿಪ್ತ ರೀತಿಯಲ್ಲಿ ಮಸೀದಿಯ ವರದಿ ಪ್ರಸ್ತುತಪಡಿಸಿ ಹೇಳಿದರು. ಈ ಸಂದರ್ಭದಲ್ಲಿ Mr. Rarhan ಅವರು architector ಆಗಿದ್ದರು ಮತ್ತು Mr. Vogelis ಅವರು constructor ಆಗಿದ್ದರು. ಅವರ ಬಗ್ಗೆ ಹೇಳಬಯಸುತ್ತೇನೆ. ಇದಲ್ಲದೆ IAAAEನ Team, ಸ್ಥಳೀಯ ಜಮಾಅತಿನ ಅಧ್ಯಕ್ಷರು Haneef Hendrick ಸಾಹಿಬ್ ಮತ್ತು ಅವರ ತಂಡದ ಕುರಿತು ಹೇಳಬಯಸುತ್ತೇನೆ. ಅವರು ತುಂಬ ಪರಿಶ್ರಮ ವಹಿಸಿ ಕಾರ್ಯ ನಿರ್ವಹಿಸಿದರು ಅದಲ್ಲದೇ ಬೆಲ್ಜಿಯಂ ಮತ್ತು ಜರ್ಮನಿಯ ಕೆಲವು ಮಿತ್ರರ ಬಗ್ಗೆಯೂ ಹೇಳಬಯಸುತ್ತೇನೆ. ಅವರು ಮಸೀದಿಯ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದರು. ಅದೇ ರೀತಿ ಹಣಕಾಸನ್ನು ಒಟ್ಟುಗೂಡಿಸುವ ಸಮಿತಿ ಮತ್ತು ಕೇಂದ್ರ ಮಸೀದಿಯ ಸಮಿತಿ ಅವರನ್ನು ಸ್ಮರಿಸಬಯಸುತ್ತೇನೆ. ಅಂತೆಯೇ ಆ ಎಲ್ಲಾ ಪುರಷ ಮತ್ತು ಮಹಿಳೆಯರು ಹಲವು ವರ್ಷಗಳಿಂದ ಈ ಮಸೀದಿ ನಿರ್ಮಾಣ ಕಾರ್ಯದಲ್ಲಿ ತೊಡಗಿರುತ್ತಾರೆ. ಇವರೆಲ್ಲರನ್ನು ನೆನಪಿಸುವುದು ಮತ್ತು ಅವರನ್ನು ಅಭಿನಂದಿಸುವುದು ಬಹು ಅವಶ್ಯಕವಾಗಿದೆ.

ಅಮೀರ್ ಸಾಹಿಬರು ಹೇಳಿದರು. ಈ ಮಸೀದಿಯ ಪ್ರಾಜೆಕ್ಟ್‌ನಲ್ಲಿ ಸ್ವಯಂಸೇವಕರಾಗಿ 65000 ಗಂಟೆ ಸಂಭಾವನೆಯಿಲ್ಲದೇ ಕಾರ್ಯ ನಿರ್ವಹಿಸಿದ್ದಾರೆ. ಇಲ್ಲಿ ಕೆಲಸ ಮಾಡಿದವರು ಅಸಂಖ್ಯಾತ ಜನರಿದ್ದಾರೆ. ನಾನು ತಮ್ಮೊಂದಿಗೆ ಅವರಿಗೋಸ್ಕರ ಪ್ರಾರ್ಥಿಸಲು ಬೇಡಿಕೊಳ್ಳುತ್ತೇವೆ.

*************

**01 ಅಕ್ಟೋಬರ್ 2019 (ಮಂಗಳವಾರ)**

ಮಸ್ಜಿದ್ ಉದ್ಘಾಟನಾ ಸಂದರ್ಭದಲ್ಲಿ ಒಂದು ವಿಶೇಷ ಸಮಾರಂಭದ ಆಯೋಜನೆ.

ಅನಂತರ ಡಚ್ ರಾಜಕಾರಣಿಗಳು Jenzy soetekouw ರವರ ಸಂಬಂಧ ನೇಬರ್ ಪಾರ್ಟಿ (PUDA)ಯಿಂದ ಇದೆ. 2018 ರಿಂದ Aldeman ಪರವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಅಲ್ಮಿರೆಯ Deputy Manager ಆಗಿದ್ದಾರೆ. ಅವರು ತಮ್ಮ ಪರಿಚಯ ಪತ್ರ ಪ್ರಸ್ತುತಪಡಿಸಿದರು. ಅವರು ಹೇಳಿದರು. ಇಂದು ತಮ್ಮ ಆಗಮನವು ನನಗೆ ತುಂಬ ಗೌರವ ಮಾತಾಗಿದೆ. ಮಸ್ಜಿದ್ ಉದ್ಘಾಟನೆಯ ಈ ಶುಭ ಸಂದರ್ಭದಲ್ಲಿ ತಮ್ಮೆಲ್ಲರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಿಮ್ಮಲ್ಲಿ ಹೆಚ್ಚಿನವರಿಗೆ ತಿಳಿದಿರಬಹುದು. ಈ ಪ್ರದೇಶವು ಕೇವಲ 42 ವರ್ಷಗಳ ಹಳೆಯದ್ದಾಗಿದೆ. ಹೀಗಾಗಿ ಇದು ಹಾಲೆಂಡಿನ ಎಲ್ಲದ್ದಕ್ಕಿಂತ ಹೊಸ ನಗರವಾಗಿದೆ. ನೀವು ಒಂದು ಹೊಸ ಭೂಮಿಯ ಮೇಲೆ ನಿಂತಿರುವಿರಿ ಈ ಪ್ರದೇಶದ ಜನಸಂಖ್ಯೆ ಸೊನ್ನೆಯಿಂದ 2 ಲಕ್ಷ 10 ಸಾವಿರವರೆಗೆ ತಲುಪಿದೆ. ಲೋಕದಾದ್ಯಂತದಿಂದ ಮತ್ತು ವಿವಿಧ ಧರ್ಮಗಳಿಂದ ಸಂಬಂಧಿಸಿದ ಜನರು ಅಲ್ಮಿರೆಯಲ್ಲಿ ಬಂದು ನೆಲೆಸಿದ್ದಾರೆ. ಆದ್ದರಿಂದ ಇಂದು ನಾವು 140 ದೇಶಗಳಿಂದ ಸಂಬಂಧಿಸಿದ 119 ಪೀಳಿಗೆಗಳ ಐಕ್ಯತೆಯನ್ನು ಆಚರಿಸುತ್ತಿದ್ದೆವು. ವಿವಿಧತೆಯಲ್ಲಿಯೂ ಒಂದು ವಿಶೇಷ ಬಲವಿದೆ. ನಾವಿಬ್ಬರೂ ಐಕ್ಯಗೊಂಡು ಪರಸ್ಪರ ಪ್ರಭಾವ ಬೀರುವವರು ಆಗಬಲ್ಲೆವು ಮತ್ತು ಹೊಸ ರೀತಿಯ ಅನುಭವಗಳನ್ನು ಪಡೆಯಬಹುದು. ಈ ಮಸೀದಿಯ ಉದ್ದೇಶವಾದ "ಪ್ರೀತಿ ಎಲ್ಲರಲ್ಲೂ ದ್ವೇಷವಿಲ್ಲ ಯಾರಲ್ಲೂ" ನನಗೆ ಬಹಳ ಮೆಚ್ಚುಗೆಯಾಯಿತು. ಇಂದು ನಾವು ಒಂದು ಹೊಸ ಜಮಾಅತ್‌ನ್ನು ಈ ನಗರಕ್ಕೆ ಸ್ವಾಗತ ಬಯಸುವೆವು.

ಉಪಮೇಯರ್ ಮತ್ತು Aldeman ಆದ ನೆಲೆಯಲ್ಲಿ ನಾನು ಈ ವಿವಿಧ ಪರಿಸ್ಥಿತಿಗಳ ಸಮ್ಮೀಳನವನ್ನು ಶ್ಲಾಘಿಸುತ್ತೇನೆ. ಹೌದು! ನೀವು ವಿವಧತೆಯ ಐಕ್ಯತೆಯ ಪರ್ವ ಆಚರಿಸಲು ಬಯಸಿದರೆ ನಮ್ಮ ಮೇಲೆ ಎರಡು ಹೊಣೆಗಾರಿಕೆ ಇರುತ್ತವೆ. ಒಂದನೆಯದಾಗಿ ಅಲ್ಮಿರೆ ನಗರದ ಪ್ರತಿ ನಾಗರಿಕನ ಉದ್ದೇಶ ಒಂದೇ ಬುನಾದಿ ಹೊಂದಿರಬೇಕಾಗಿದೆ. ಅಲ್ಮಿರೆಯಲ್ಲಿ ನಿಮ್ಮೆಲ್ಲರಿಗೂ ಸಂಪೂರ್ಣ ಸ್ವಾತಂತ್ರ್ಯವಿದೆ. ನಿಮ್ಮ ವಿಶ್ವಾಸ ಯಾವುದೇ ಇರಬಹುದು. ಅದು ನಿಮಗೆ ಸೇರಿದೆ. ಆದ್ದರಿಂದ ಎಲ್ಲ ನಾಗರಿಕರು ಪರಸ್ಪರ ಸೌಹಾರ್ಧತೆಯಿಂದ ಕೂಡಿಕೊಂಡು ಇರಬೇಕು. ಇದು ವಿವಿಧ ಜನರಿಂದ ತುಂಬಿದ ಸ್ಥಳ ನೋಡಿಯೇ ಅಂದಾಜಿನ ಹೊಸ ಸಂಬಂಧಗಳು ಪ್ರಾರಂಭಗೊಂಡಿವೆ ಮತ್ತು ಇದು ತುಂಬ ಒಳ್ಳೆಯ ಬೆಳವಣಿಗೆಯಾಗಿದೆ.

ಎರಡನೇ ವಿಷಯವೇನೆಂದರೆ ನಾವು ಸ್ವತಂತ್ರರು ಎನಿಸಲ್ಪಡಲು ಪ್ರತಿಯೊಂದು ಮನುಷ್ಯನ ಹಕ್ಕುಗಳನ್ನು ರಕ್ಷಿಸುವವರಾದಾಗ ಮಾತ್ರ ಸಾಧ್ಯ ಎನ್ನಬಹುದು. ಎಲ್ಲರೂ ತಮ್ಮನ್ನು ಸುರಕ್ಷಿತರು ಎಂದು ಭಾವಿಸಬೇಕು. ಇಲ್ಲಿ ಪೋಲಿಸರೂ ಇದ್ದಾರೆ. ನಾನು ಉಪ ಮೇಯರ್ ಆಗಿ ಬಂದು ಮಾತನಾಡುತ್ತಿದ್ದೇನೆ. ಆದ್ದರಿಂದ ನಮ್ಮ ಯಾವುದೇ ಧರ್ಮವಿರಲಿ, ವಿಶ್ವಾಸ ಯಾವುದಿರಲಿ ನೀವು ಈ ನಗರದ ಆಡಳಿತಗಾರರ ಮೇಲೆ ಭರವಸೆ ಹೊಂದಬಹುದಾಗಿದೆ.

ಮೂರನೇ ವಿಷಯ ನಾವು ನಿಮ್ಮಿಂದ ಬಹಳಷ್ಟು ಕಲಿಯಬಯಸುತ್ತೇವೆ. ಏಕೆಂದರೆ ನಾವೆಲ್ಲರೂ ಸೇರಿ ಒಂದು ಸಮುದಾಯಕ್ಕೆ ಜನ್ಮ ನೀಡುತ್ತಿದ್ದೇವೆ. ನಮ್ಮದು ಒಂದು ಅನುಪಮ ಸ್ಥಾನವಿದೆ. ಏಕೆಂದರೆ ಇಡೀ ಯೂರೋಪ್ ಖಂಡದಲ್ಲಿ ನಮ್ಮ ನಗರ ಮಾತ್ರ ಅದರಲ್ಲಿ ಒಂದು ಪೀಳಿಗೆ ಮಾತ್ರ ಇಲ್ಲಿಯವರೆಗೆ ಬಂದಿದೆ. ಬಹಳ ಸಂಕ್ಷಿಪ್ತವಾದ ಇತಿಹಾಸ ಈ ನಗರಕ್ಕಿದೆ. ಆದ್ದರಿಂದ ಪ್ರತಿ ದಿನ ನಾವು ಈ ನಗರದ ಒಂದು ಹೊಸ ಇತಿಹಾಸವನ್ನು ಸೃಷ್ಟಿಸುತ್ತಿದ್ದೆವು. ಮಸೀದಿಯ ಉದ್ಘಾಟನೆಯೂ ಇದರ ಒಂದು ಅಂಗವಾಗಿದೆ. ನಾನು ಮತ್ತು ಈ ನಗರದ ಇತರ ಜನರೂ ಕೂಡ ನಮ್ಮ ಜಮಾಅತಿನಿಂದ ಬಹಳಷ್ಟು ಕಲಿಯುವೆವು. ನಾನು ಈ ಮಾತು ಉಪ ಮೇಯರ್ ಆದ ನೆಲೆಯಲ್ಲಿ ಹೇಳುತ್ತಿಲ್ಲ. ಬದಲಾಗಿ ಈ ನಗರದ ನಿವಾಸಿಯಾದ ನೆಲೆಯಲ್ಲಿ ಹೇಳುತ್ತಿದ್ದೇನೆ.

ಉಪ ಮೇಯರ್ ತಮ್ಮ ಭಾಷಣದ ಕೊನೆಯದಾಗಿ ಹೇಳಿದರು. ಅಲ್ಲಾಹನು ನಿಮ್ಮೆಲ್ಲರಿಗೂ ಅನುಗ್ರಹಿಸಲಿ. ಬನ್ನಿ ನಾವೆಲ್ಲರೂ ಸೇರಿ ಈ ಮಸೀದಿಯ ಉದ್ಘಾಟನಾ ಸಮಾರಂಭವನ್ನು ಆಚರಿಸುವ. ನಿಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುವೆನು. ಈ ಸಮಾರಂಭಕ್ಕೆ ನಾನು ಬಂದಿರುವುದು ನನಗೆ ಗೌರವದ ವಿಷಯವಾಗಿದೆ. ನಿಮ್ಮೆಲ್ಲರಿಗೂ ಅಭಿನಂದನೆಗಳು.

ಅನಂತರ ಹುಝೂರ್(ಅಬಿಅ) 6 ಗಂಟೆ 40 ನಿಮಿಷಕ್ಕೆ ಇಂಗ್ಲೀಷ್‌ನಲ್ಲಿ ಸಂಬೋಧಿಸಿದರು. ಈ ಸಂಬೋಧನೆಯ ಉರ್ದು ಅನುವಾದ ಪ್ರಸ್ತುತವಿದೆ.

**ಹುಝೂರ್ ಅನ್ವರ್ (ಅಬಿಅ) ರವರ ಸಂಬೋಧನೆ**

ತಶಹುದ್ ತಅವ್ವೂದ್ ನಂತರ ಹುಝೂರ್(ಅಬಿಅ) ನುಡಿಯುತ್ತಾರೆ:

ಗೌರವಾನ್ವಿತ ಅತಿಥಿಗಳೇ! ನಿಮ್ಮೆಲ್ಲರ ಮೇಲೆ ಅಲ್ಲಾಹನ ಶಾಂತಿ ಇರಲಿ ಮತ್ತು ಅನುಗ್ರಹವಿರಲಿ. ಮೊಟ್ಟ ಮೊದಲಾಗಿ ಅಲ್ಮಿರೆಯ ಈ ಮಸೀದಿಯ ಉದ್ಘಾಟನಾ ಸಮಾರಂಭಕ್ಕೆ ನಮ್ಮ ಆಮಂತ್ರಣ ಸ್ವೀಕರಿಸಿ ಇಲ್ಲಿ ಬಂದದ್ದಕ್ಕೆ ತಮ್ಮೆಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಇಂದಿನ ಸಮಯದಲ್ಲಿ ಯೂರೋಪಿನ ಜನರು ಇಸ್ಲಾಮ್ ಮತ್ತು ಮುಸಲ್ಮಾನರ ಕುರಿತು ಬಹಳಷ್ಟು ಅಪನಂಬಿಕೆಗಳನ್ನು ಹೊಂದಿದವರಾಗಿದ್ದಾರೆ. ನಿಸ್ಸಂಶಯವಾಗಿ ಬಹಳಷ್ಟು ಜನರು ಇಸ್ಲಾಮ್ ಧರ್ಮದ ಅನುಯಾಯಿಗಳಿಂದ ಭಯಪಡುತ್ತಿದ್ದಾರೆ. ಹೀಗಿರುವಾಗಲೂ ನೀವು ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಇಲ್ಲಿಗೆ ಬಂದಿದ್ದು ಉತ್ತಮ ಉದಾಹರಣೆಗೆ ಸಾಕ್ಷಿಯಾಗಿದೆ. ಮತ್ತು ನೀವು ವಿವಿಧ ಸಮುದಾಯಗಳ ವಾಧ, ವಿಭಿನ್ನ ವಿಶ್ವಾಸ ಉಳ್ಳವರ ಮಧ್ಯೆ ಸೌಹಾರ್ಧ ಸಂಬಂಧ ಬಯಸುವವರಾಗಿರುವಿರಿ. ಇದರಿಂದ ನೀವು ವಿವಿಧ ಮೌಲ್ಯ ಗ್ರಹಿಸುವರಾಗಿದ್ದೀರಿ. ನಾನು ಆತ್ಮೀಯವಾಗಿ ನಿಮ್ಮ ಈ ಮಾತಿಗಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ನಿಮಗೆ ಭರವಸೆ ನೀಡಬಲ್ಲೆ. ನಮ್ಮ ಧರ್ಮವು ಈ ಶಿಕ್ಷಣ ನೀಡುತ್ತಿದೆ. ಧರ್ಮ ಎಂಬುದು ಪ್ರತಿಯೊಬ್ಬ ಮನುಷ್ಯನ ಮನಸ್ಸಿಗೆ ಸಂಬಂಧಪಟ್ಟದ್ದಾಗಿದೆ. ಯಾರೊಬ್ಬರ ಹಸ್ತಕ್ಷೇಪ ಬಲವಂತವಿಲ್ಲದೇ ಸ್ವೀಕರಿಸಬಹುದಾಗಿದೆ.

ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ಸ್ಪಷ್ಟಪಡಿಸುತ್ತದೆ. "ಧರ್ಮದಲ್ಲಿ ಯಾವುದೇ ಬಲವಂತ ಸಲ್ಲದು" ಮಸೀದಿಯ ಉದ್ಘಾಟನೆಯೂ ಒಂದು ಅಪ್ಪಟ ಧಾರ್ಮಿಕ ಕಾರ್ಯವಾಗಿದೆ. ನೀವು ಅಚ್ಚರಿ ಪಡುವಿರಿ. ನಾವು ತಮ್ಮ ಮಸೀದಿಯೊಂದಿಗೆ ಆತ್ಮೀಯ ಸಂಬಂಧ ಹೊಂದಿರುತ್ತೇವೆ. ಇದು ನಮಗೆ ಸಂತಸದ ಸಂದರ್ಭವಾಗಿದೆ. ನಮಗೆ ಈ ನಗರದಲ್ಲಿ ಅಲ್ಲಾಹನ ನಿರ್ದೇಶನದಂತೆ

ಅವನ ಆರಾಧನೆ ಮಾಡಲು ಒಂದು ಸ್ಥಳ ದೊರೆತಿದೆ. ಆದರೆ ಇದರಲ್ಲಿ ಭಾಗವಹಿಸಿದ ನಿಮ್ಮೆಲ್ಲರಿಗೆ ಇದು ಆಸಕ್ತಿಯ ವಿಷಯವಲ್ಲ. ಆದರೂ ನೀವು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೀರಿ. ಇದರಿಂದ ಸ್ಪಷ್ಟಪಡುವುದೇನೆಂದರೆ ನೀವು ಪ್ರೀತಿಯುಳ್ಳವರು, ಉದಾರಿಗಳು, ಮತ್ತು ಸಹಿಷ್ಣುತೆ ಹೊಂದಿದ ಜನರಾಗಿದ್ದೀರಿ. ಇದರಿಂದ ಇನ್ನೊಂದು ವಿಷಯ ತಿಳಿದು ಬರುವುದೇನೆಂದರೆ ನೀವು ಮಸೀದಿ ನಿರ್ಮಾಣದ ಕಾರಣಗಳು ಮತ್ತು ಉದ್ದೇಶಗಳನ್ನು ತಿಳಿಯ ಬಯಸುವಿರಾಗಿದ್ದೀರಿ. ಇದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಏಕೆಂದರೆ ನಮ್ಮನ್ನು ವಿಭಜಿಸ ಬಯಸುವ ಜನರನ್ನು ಗುರುತಿಸಲು ಇತರೆ ಧರ್ಮಗಳ ವಿಶ್ವಾಸಗಳ ಬಗ್ಗೆ ತಿಳುವಳಿಕೆ ಹೊಂದುವುದು ಅವಶ್ಯಕವಾಗಿದೆ.

ಹುಝೂರ್(ಅಬಿಅ) ಹೇಳಿದರು. ಖಂಡಿತವಾಗಿಯೂ ಇದು ನನಗೆ ಮತ್ತು ಪ್ರತಿಯೊಂದು ಶಾಂತಿ ಬಯಸುವ ಮುಸಲ್ಮಾನರಿಗೆ ದುಃಖದ ವಿಷಯವಾಗಿದೆ. ಅನ್ಯ ದೇಶಗಳಲ್ಲಿ ಇಸ್ಲಾಮ್ ಮತ್ತು ಮುಸಲ್ಮಾನರ ಕುರಿತು ಶಂಕೆಗಳಿವೆ. ಅವರು ಮುಸಲ್ಮಾನರನ್ನು ಹಾಗೂ ಮಸೀದಿಯ ಸಂಸ್ಕೃತಿಗಳನ್ನು ಶಾಂತಿಗೋಸ್ಕರ ಅಪಾಯವೆಂದು ಭಾವಿಸುತ್ತಾರೆ. ಆದರೆ ವಾಸ್ತವ ಭಿನ್ನವಾಗಿದೆ. ಆದ್ದರಿಂದ ಮಸೀದಿಯಿಂದ ಅಪಾಯ ನಿರೀಕ್ಷಿಸುವ ಜನರಿಗೆ ಮಸೀದಿ ನಿರ್ಮಾಣದ ಉದ್ದೇಶಗಳನ್ನು ಹೇಳಬಯಸುತ್ತೇನೆ. ಇದರಿಂದ ನೀವು ಮಸೀದಿ ನಿರ್ಮಾಣದ ಪ್ರಾಮುಖ್ಯತೆ ತಿಳಿಯುವಿರಿ.

ಮಸೀದಿಯ ಮುಖ್ಯ ಉದ್ದೇಶವು ಏಕದೇವನ ಆರಾಧನೆಯಾಗಿದೆ. ಆದ್ದರಿಂದ ಮಸೀದಿಯು ಪ್ರತಾಪಶಾಲಿಯಾದ ಅಲ್ಲಾಹನ ಮುಂದೆ ಸಾಷ್ಟಾಂಗವೆರಗಳು ಒಟ್ಟಾಗುವ ಸ್ಥಳವಾಗಿದೆ. ಮಸೀದಿ ನಿರ್ಮಾಣದ ಎರಡನೆಯ ಮುಖ್ಯ ಉದ್ದೇಶ ಮುಸಲ್ಮಾನರು ಒಟ್ಟುಗೂಡಿ ತಮ್ಮ ಪರಸ್ಪರ ಸಂಬಂಧಗಳನ್ನು ಉತ್ತಮ ಗೊಳಿಸಿಕೊಳ್ಳುವುದಾಗಿದೆ. ಮತ್ತು ಸಾಮೂಹಿಕ ಐಕ್ಯತೆ ಸಾಧಿಸುವುದಾಗಿದೆ. ಮಸೀದಿಗಳ ನರ್ಮಾಣದ ಮೂರನೆಯ ಮುಖ್ಯ ಉದ್ದೇಶ ಮುಸ್ಲಿಮೇತರರಿಗೆ ಇಸ್ಲಾಮಿ ಶಿಕ್ಷಣಗಳ ಬಗ್ಗೆ ಮಾಹಿತಿ ನೀಡುವುದಾಗಿದೆ. ಸಾಮಾಜಿಕ ವರ್ತನೆ ಮತ್ತು ಸಮಾಜದ ಹಕ್ಕುಗಳನ್ನು ಪಾಲಿಸುವುದಾಗಿದೆ. ಮಸೀದಿಯ ವರ್ಣ ಭೇಧ ಭಾವವಿಲ್ಲದೇ ಮುಸಲ್ಮಾನರು ಒಟ್ಟುಗೂಡಿ ತನ್ನ ನೆರೆಹೊರೆಯ ಹಾಗೂ ಸಮಾಜದ ಹಕ್ಕುಗಳನ್ನು ನೀಡುವುದಾಗಿದೆ.

ಹುಝೂರ್(ಅಬಿಅ) ಹೇಳಿದರು. ನೆನಪಿರಲಿ! ಯಾವುದೇ ಮಸೀದಿ ಶಾಂತಿ ಮತ್ತು ಸೌಹಾರ್ಧತೆ ಹಾಗೂ ಮಾನವೀಯತೆಯ ಸಂದೇಶ ನೀಡದಿದ್ದರೆ ಮತ್ತು ಅಲ್ಲಾಹನ ಹಾಗೂ ಅವನ ಸೃಷ್ಟಿಗಳ ಹಕ್ಕುಗಳನ್ನು ಪಾಲಿಸದಿದ್ದರೆ ಇಂತಹ ಮಸೀದಿಗಳು ನಾಮಮಾತ್ರದ್ದು ಅದರ ಉದಾಹರಣೆ ಸಿಪ್ಪೆಗಳಂತೆ ಆಗಿದೆ.

ಇಸ್ಲಾಮಿನ ಇತಿಹಾಸದ ಮೇಲೆ ಸಾಮಾನ್ಯವಾಗಿ ದೃಷ್ಟಿಹಾಯಿಸಿದರೂ ತಿಳಿಯಬಹುದು. ಇಸ್ಲಾಮಿನ ಸ್ಥಾಪಕರಾದ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಕಾಲದಲ್ಲಿ ಇಂತಹದೇ ಒಂದು ನಾಮ ಮಾತ್ರದ ಮಸೀದಿ ಕಟ್ಟಲಾಗಿತ್ತು. ಅಲ್ಲಿ ಸಮಾಜ ಘಾತುಕ ಚಟುವಟಿಕೆಗಳು ನಡೆಯುತ್ತಿದ್ದವು. ಇದು ಮುಸಲ್ಮಾನರ ಮಧ್ಯೆ ದ್ವೇಷದ ಜ್ವಾಲೆಗಳು ಉತ್ತೇಜಿಸುವುದು, ಮುಸಲ್ಮಾನರ ಹಾಗೂ ಇತರ ಪಂಗಡಗಳ, ವಿಶೇಷವಾಗಿ ಯಹೂದಿ ಗೋತ್ರಗಳ ಮಧ್ಯೆ ಯುದ್ಧ ಸಾರಲು ನಿರ್ಮಿಸಲಾಗಿತ್ತು. ಪರಿಣಾಮವಾಗಿ ಪವಿತ್ರ ಖುರ್‌ಆನಿನಲ್ಲಿ ಇದರ ಉಲ್ಲೇಖ ಹೀಗಿದೆ. ಅಲ್ಲಾಹನು ರಸೂಲುಲ್ಲಾಹ್(ಸ) ರವರಿಗೆ ಈ ಮಸೀದಿಯನ್ನು ಕೆಡವಿ ಹಾಕಲು ನಿರ್ದೇಶಿಸಿದ್ದನು. ಏಕೆಂದರೆ ಕಪಟತನದಿಂದ ಈ ಮಸೀದಿಯನ್ನು ಕಟ್ಟಲಾಗಿತ್ತು. ಆದ್ದರಿಂದ ಈ ಮಸೀದಿಯನ್ನು ಕೆಡವಿ ಹಾಕಲಾಯಿತು. ನಾನು ಹೇಳಿದಂತೆ ಇದರ ಬಗ್ಗೆ ಖುರ್‌ಆನಿನಲ್ಲಿ ಉಲ್ಲೇಖಿತವಾಗಿದೆ. ಆದ್ದರಿಂದ ಈ ಘಟನೆ ಯಾವಾಗಲೂ ಮುಸ್ಲಿಮರಿಗೆ ಒಂದು ಎಚ್ಚರಿಕೆಯ ಗಂಟೆಯಂತಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಯಾವುದೇ ಮಸೀದಿ ಶಾಂತಿ ಸೌಹಾರ್ಧತೆಯ ಬದಲು ಉಗ್ರತೆ, ಕಪಟತನ ಸಾಧಿಸುವ ಉದ್ದೇಶ ಹೊಂದಿದರೆ ಎಂದೂ ಅದು ತನ್ನ ಉದ್ದೇಶದಲ್ಲಿ ಸಾರ್ಥಕವಾಗದು. ಅಲ್ಲದೇ ವಾಸ್ತವವಾಗಿ ಮಸೀದಿ ಎನ್ನಲು ಅರ್ಹರಾಗುವುದಿಲ್ಲ. ಒಂದು ಮಸೀದಿಯ ಉದ್ದೇಶ ಆಗ ಮಾತ್ರ ಸಾರ್ಥಕವಾಗುವುದು. ಯಾವಾಗಲು ಒಬ್ಬ ನಮಾಝಿಯು ಮಸೀದಿಯಲ್ಲಿ ಕೇವಲ ಅಲ್ಲಾಹನ ಆರಾಧನೆಗೆ ಮಾತ್ರ ಪ್ರವೇಶ ಮಾಡುವವರಾಗಬೇಕು. ಮಸೀದಿಯಿಂದ ಮಾನವೀಯತೆಯ ಸೇವೆಯಾಗಬೇಕು. ಆರಾಧನೆ ಮಾಡುವವರಲ್ಲಿ ವಿನಮ್ರತೆ, ಮಾನವೀಯತೆ, ಸೌಹಾರ್ಧತೆ, ಪ್ರೀತಿ ಇದ್ದಾಗ ಮಾತ್ರ ಮಸೀದಿ ನಿರ್ಮಾಣದ ಉದ್ದೇಶ ಸಾರ್ಥಕವಾಗಿರುತ್ತದೆ.

ಹುಝೂರ್(ಅಬಿಅ) ಹೇಳಿದರು. ಇನ್ನೊಂದು ವಿಷಯ ನಾನು ಸ್ಪಷ್ಟಪಡಿಸಬಯಸುತ್ತೇನೆ. ಮಸೀದಿಯು ಧಾರ್ಮಿಕ ಮತ್ತು ಆಧ್ಯಾತ್ಮಿಕ ಉನ್ನತಿಯ ಉದ್ದೇಶ ಹೊಂದಿರುವುದು ಅವಶ್ಯಕವಾಗಿದೆ. ಅದು ಎಲ್ಲ ತರಹದ ಭೌತಿಕತೆ ಮತ್ತು ಸಮಾಜದ ಶಾಂತಿ ಕೆಡಿಸುವಂತಹ ಚಟುವಟಿಕೆ ಹೊಂದಿರಬಹುದಾಗಿದೆ. ಇಸ್ಲಾಮ್ ಸ್ಥಾಪರಾದ ಹಝ್‌ರತ್ ಮುಹಮ್ಮದ್(ಸ) ಇಂತಹವರಿಂದ ದೂರವಿರಲು ಬಯಸುತ್ತಾರೆ.

ಹುಝೂರ್(ಅಬಿಅ) ಹೇಳಿದರು. ಮಸೀದಿಯಲ್ಲಿ ಕೇವಲ ಅಲ್ಲಾಹನ (ಏಕದೇವನ) ಆರಾಧನೆ ಮಾಡಲು ಅಥವಾ ಇಸ್ಲಾಮಿನ ಶಾಂತಿಪೂರ್ಣ ಶಿಕ್ಷಣದ ಪ್ರಚಾರ ಮಾಡಲು ಅಥವಾ ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುವ ಕಡೆ ಗಮನ ಹರಿಸುವಂತಹ ಕಾರ್ಯಕ್ರಮಗಳಿಗೆ ಮಾತ್ರ ಅನುಮತಿ ಇರುತ್ತದೆ. ನಾವು ಮಸೀದಿ ನಿರ್ಮಾಣ ಮಾಡಿ ಅಲ್ಲಾಹನನ್ನು ಆರಾಧಿಸಲು 5 ಹೊತ್ತು ಒಟ್ಟು ಸೇರುತ್ತೇವೆ. ಅಲ್ಲಿ ತಮ್ಮ ಆಧ್ಯಾತ್ಮಿಕ ಹಾಗೂ ಅತ್ಯುತ್ತಮ ನಡತೆಗೋಸ್ಕರ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ. ಅಲ್ಲಿ ವಿಧಿಬದ್ಧವಾಗಿ ನೆರೆಹೊರೆಯವರಿಗೆ ಹಾಗೂ ಸಾಮಾಜಿಕ ಸೇವೆಗಳಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ.

ಹುಝೂರ್(ಅಬಿಅ) ಹೇಳಿದರು. ನಾವು ನಿರ್ಗತಿಕರ ಅಗತ್ಯಗಳನ್ನು ಪೂರೈಸುವಂತಹ ಅನಾಥರ ಹಕ್ಕುಗಳನ್ನು ರಕ್ಷಿಸುವಂತಹ, ಹಾಗೂ ಸಮಾಜದ ಹಿಂದುಳಿದ ವರ್ಗಗಳ ಉನ್ನತಿಗೋಸ್ಕರ ಯೋಜನೆಗಳನ್ನು ಸಿದ್ಧಪಡಿಸುತ್ತೇವೆ. ಅಲ್ಲಾಹನ ಅನುಗ್ರಹದಿಂದ ಈ ಪ್ರಯತ್ನಗಳನ್ನು ಹೆಚ್ಚಿಸಲು ನಾವು ಜಾಗತಿಕ ಒಳಿತಿಗಾಗಿ "Humanity first" ಎಂಬ ಒಂದು ಸಂಸ್ಥೆ ಸ್ಥಾಪಿಸಿದೆವು. ನಾವು ವರ್ಷಪೂರ್ತಿ ಸ್ಥಳೀಯ ಹಾಗೂ ಲೋಕದಾದ್ಯಂತ ಈ ಸಂಸ್ಥೆಗೆ ಸಂಬಂಧಿಸಿದ ಸಮಾರಂಭಗಳನ್ನು ಏರ್ಪಡಿಸುತ್ತೇವೆ. ಉದಾಹರಣೆಗಾಗಿ ಆಫ್ರಿಕಾದಲ್ಲಿ ನಾವು ಇಸ್ಲಾಮಿ ಶಿಕ್ಷಣವನ್ನು ಪ್ರಚಾರಗೊಳಿಸುವ ಮಸೀದಿಗಳ ನಿರ್ಮಾಣ ಜೊತೆಯಲ್ಲಿ ಸ್ಥಳೀಯ ಜನರಲ್ಲಿ ವರ್ಣ ಜಾತಿಗಳ ಭೇದ ಭಾವವಿಲ್ಲದೆ ಅವರಿಗೆ ನೆರವು ನೀಡುತ್ತೇವೆ. ನಾವು ಆಸ್ಪತ್ರೆಗಳನ್ನು ಕ್ಲಿನಿಕ್‌ಗಳು ಮತ್ತು ಶಾಲೆಗಳನ್ನು ನಿರ್ಮಿಸುತ್ತೇವೆ. ಅಲ್ಲಿ ಪ್ರತಿಯೊಬ್ಬರನ್ನು ಸ್ವಾಗತಿಸುತ್ತೇವೆ. ನಮ್ಮ ಶಾಲೆ, ಆಸ್ಪತ್ರೆಗೆ ಬರುವವರು ವಾಸ್ತವವಾಗಿ ನಮ್ಮ ಜಮಾಅತಿನವರಿಗಿಂತ ಇತರರು ಹೆಚ್ಚಿರುತ್ತಾರೆ.

ಹುಝೂರ್(ಅಬಿಅ) ಹೇಳಿದರು. ನಾವು ಕೇವಲ ಮಾನವೀಯತೆಯ ಸೇವೆ ಮಾಡಲು ಮತ್ತು ನರ್ಗತಿಕರಿಗೆ ಸಹಾಯ ನೀಡುವ ಉದ್ದೇಶದಿಂದ ಒಂದು ಯೋಜನೆ ಪ್ರಾರಂಭಿಸಿದ್ದೇವೆ. ಅದರ ಮೂಲಕ ಆಫ್ರಿಕಾದ ದೂರ ದೂರದ ಹಳ್ಳಿ, ಊರುಗಳಲ್ಲಿ ನೀರು ಒದಗಿಸುವುದಾಗಿದೆ. ನಮ್ಮ ಇಂಜಿನಿಯರುಗಳು ಬೋರ್‌ವೆಲ್ ತೆಗೆದು ನಳ ಹಾಕುತ್ತಾರೆ. ಆ ಮೂಲ ಜನರು ಶುದ್ಧ ನೀರನ್ನು ಪಡೆಯುತ್ತಾರೆ. ನೀವು ಕಣ್ಣಾರೆ ನೋಡದೆ ವಿಶ್ವಾಸ ತರಲು ಸಾಧ್ಯವಾಗಲಿಕ್ಕಿಲ್ಲ. ಅಲ್ಲಿಯ ಸ್ಥಳೀಯ ಜನರಿಗೆ ಶುದ್ಧ ನೀರಿನ ಕಲ್ಪನೆಯೂ ಇರಲಿಲ್ಲ. ಅಂತಹವರು ಮೊದಲ ಬಾರಿಗೆ ನಲ್ಲಿಗಳಿಂದ ನೀರು ಹರಿದು ಬರುವುದನ್ನು ನೋಡಿ ಆನಂದ ಭರಿತರಾಗುತ್ತಿದ್ದಾರೆ. ಕಡು ಬಡತನ ಹಾಗೂ ದಾರಿದ್ರ್ಯದಲ್ಲಿ ಜನ್ಮ ತಾಳಿರುವ ಈ ಮುಗ್ಧ ಮಕ್ಕಳ ಹರ್ಷ ವರ್ಣಾತೀತವಾಗಿದೆ. ಈ ಸ್ಥಳೀಯ ಜನರು ಪೀಳಿಗೆ ಪೀಳಿಗೆಯಿಂದ ದಿನನಿತ್ಯ ತಮ್ಮ ಶಿರದ ಮೇಲೆ ಕೊಡಗಳನ್ನು ಇಟ್ಟುಕೊಂಡು ತಮ್ಮ ಮನೆಗಳಿಂದ ಮೈಲುಗಟ್ಟಲೆ ದೂರ ಹೋಗಿ ನೀರು ತರಲು ವಿವಶರಾಗಿದ್ದರು. ಅಷ್ಟು ಕಷ್ಟಪಟ್ಟು ತರುವ ನೀರು ಶುದ್ಧವು ಇರುತ್ತಿರಲಿಲ್ಲ. ಅದರಿಂದ ಹಲವು ರೋಗಗಳಿಗೆ ತುತ್ತಾಗುತ್ತಿದ್ದರು. ಇಂತಹ ಪರಿಸ್ಥಿತಿಗಳಲ್ಲಿ ಆ ನಿರಾಶರಾದ ಜನರು ಸ್ವಚ್ಛ ಹಾಗೂ ಶುದ್ಧ ನೀರನ್ನು ಕಂಡು ಅವರಿಗೆ ಲೋಕದ ಖಜಾನೆಗಳೇ ದೊರೆತಂತೆ ಕಂಡುಬರುತ್ತದೆ.

ಹುಝೂರ್(ಅಬಿಅ) ಹೇಳಿದರು. ನಮ್ಮ ವಿಶ್ವಾಸ ಪ್ರಕಾರ ಒಬ್ಬ ಮುಸಲ್ಮಾನನು ಅಲ್ಲಾಹನ ಆರಾಧನೆ ಮತ್ತು ಮಸೀದಿಯ ಹಕ್ಕುಗಳನ್ನು ಪಾಲಿಸುವ ಇಚ್ಛೆಯುಳ್ಳವರಾದರೆ ಅವರಿಗೆ ಅವಶ್ಯವಾಗಿ ಮಾನವ ಹಕ್ಕುಗಳನು ಪಾಲಿಸುವುದು ಅನಿವಾರ್ಯವಾಗಿರುತ್ತದೆ. ಅಲ್ಲಾಹನ ಭಕ್ತಿ ಮತ್ತು ಮಾನವ ಸೇವೆ ಮುಸಲ್ಮಾನನ ದೃಷ್ಟಿಯಲ್ಲಿ ಒಂದಕ್ಕೊಂದು ಬಿಡಿಸಿರಲಾದ ಸಂಬಂಧ ಹೊಂದಿದೆ. ಒಬ್ಬ ಮುಸಲ್ಮಾನನು ಇವರಿಗೆ ಕಷ್ಟಗಳನ್ನು ಒಡ್ಡಿ ಅವರನ್ನು ಗೊಂದಲಕ್ಕೆ ಸಿಕ್ಕಿಸಿದರೆ ಮತ್ತು ಅನುಕಂಪ ತೋರಿಸದಿದ್ದರೆ ಅವನು ಕ್ರಮಬದ್ಧವಾಗಿ ಅಲ್ಲಾಹನ ಆರಾಧನೆ ಮಾಡಿದರೂ ಅದು ಸಾರ್ಥಕವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನ ಸೂರ: ಅಲ್‌ಮಾಊನ್‌ನ ವಚನ 3 ರಿಂದ 7 ರಲ್ಲಿ ಹೀಗೆ ಪ್ರಸ್ತಾಪಿಸಿದೆ! ಅನಾಥರನ್ನು ದೂರಕ್ಕಿಡುವವನು ನಿರ್ಗತಿಕನಿಗೆ ಆಹಾರ ನೀಡಲು ಪ್ರೇರೇಪಿಸುವವನು, ಇಂತಹ ನಮಾಝ್ ಮಾಡುವವನ ಮೇಲೆ ವಿನಾಶವಿದೆ. ಅವರು ತೋರಿಕೆಯ ನಮಾಝ್ ಮಾಡುವವರಾಗಿದ್ದಾರೆ. ಆದ್ದರಿಂದ ಅವರು ಅಲ್ಲಾಹನ ದಾಸರ ಹಕ್ಕುಗಳನ್ನು ಪೂರೈಸುವುದಿಲ್ಲ. ಇಂತಹ ಜನರ ಪ್ರಾರ್ಥನೆಗಳು ಸ್ವೀಕಾರಗೊಳ್ಳುವುದಿಲ್ಲ. ಇಂತಹ ಜನರ ಮೇಲೆ ಅಲ್ಲಾಹನು ಆರಾಧನೆ ಮಾಡಿದರು ಶಾಪವಿದೆ ಎನ್ನುತ್ತಾನೆ. ಆದರೆ ದುರ್ಬಲರಿಗೆ, ನಿರ್ಗತಿಕರಿಗೆ ಅವರ ಹಕ್ಕುಗಳನ್ನು ನೀಡದಿದ್ದರೆ ಅವರ ಪ್ರಾರ್ಥನೆಗಳು ಸ್ವೀಕಾರಗೊಳ್ಳುವುದಿಲ್ಲ. ಅವರ ಆರಾಧನೆ ಮತ್ತು ಅವರ ಮಸೀದಿಗೆ ಪ್ರವೇಶ ಮಾಡುವುದು ಒಂದು ವಂಚನೆಯ ಕ್ರಮವಾಗಿದೆ. ವಂಚನೆಯ ಹೊರತು ಮತ್ತೇನೂ ಇಲ್ಲ. ಪವಿತ್ರ ಖುರ್‌ಆನಿನ ನಿರ್ದೇಶನದಂತೆ ಇಂತಹ ಜನರ ಆರಾಧನೆಗಳು ನಿರರ್ಥಕವಾಗಿದೆ. ಇದು ಕಪಟಕ್ರಮವಾಗಿವೆ. ಇದರಿಂದ ವಿನಾಶ ಮಾತ್ರ ದೊರೆಯುವುದು. ಆದ್ದರಿಂದ ಮಸೀದಿಗಳು ಕೇವಲ ಆರಾಧನೆಯ ಕಡೆ ನಮ್ಮ ಗಮನ ಸೆಳೆಯುವುದಿಲ್ಲ. ಬದಲಾಗಿ ಮಾನವ ಹಕ್ಕುಗಳ

ಪ್ರಾಮುಖ್ಯತೆಯೂ ತಿಳಿಸುತ್ತದೆ. ಮಸೀದಿಯ ವಾಸ್ತವ ಉದ್ದೇಶಗಳು ಹೀಗಿರುವಾಗ ಮಸೀದಿಯ ನಿರ್ಮಾಣದಿಂದ ಭಯಪಡುವ ಅಗತ್ಯವೇನಿದೆ.

ಹುಝೂರ್(ಅಬಿಅ) ಹೇಳಿದರು. ಇಸ್ಲಾಂ ಪದೇ ಪದೇ ನೆರೆಹೊರೆಯವರ ಪರ ವಹಿಸಲು ಮತ್ತು ಅವರ ಹಕ್ಕುಗಳನ್ನು ನೀಡಲು ಒತ್ತು ಕೊಟ್ಟಿದೆ. ಉದಾಹರಣೆಗೆ ಸೂರ: ಅನ್ನಿಸಾಅ ವಚನ 37 ರಲ್ಲಿ ಪವಿತ್ರ ಖುರ್‌ಆನ್ ಹೀಗೆ ನಿರ್ದೇಶನ ನೀಡಿದೆ. ಮಾತಪಿತರಿಗೆ ನೀವು ಒಳಿತನ್ನು ಮಾಡಿರಿ. ನಿಕಟ ಸಂಬಂಧಿಗಳಿಗೂ ಪ್ರೀತಿಯಿದ ವ್ಯವಹರಿಸಿರಿ. ಅಲ್ಲದೇ ಈ ನಿರ್ದೇಶನವು ನೀಡುತ್ತಿದೆ.

ನಿಕಟ ಸಂಬಂದಿಯಾದ ನೆರೆಹೊರೆಯವನಿಗೂ ಅವರ ಹಕ್ಕುಗಳನ್ನು ನೀಡಲು ವಿಶೇಷವಾದ ಒತ್ತು ನೀಡಿದೆ. ಮುಸಲ್ಮಾನರಿಗೆ ತಮ್ಮ ನೆರೆಹೊರೆಯವರ ಜೊತೆಯಲ್ಲಿ ಅವರೊಂದಿಗೆ ನಿಕಟ ಸಂಬಂಧ ಇರಲಿ, ಇಲ್ಲದಿರಲಿ ಪ್ರೀತಿಯ ವ್ಯವಹಾರ ಮಾಡಲು ಮತ್ತು ಅವರ ಸುರಕ್ಷತೆಯ ಕುರಿತು ಮತ್ತು ತಕ್ಕುದಾದ ಸಹಾಯ ಮಾಡಲು ಯಾವಾಗಲೂ ಸಿದ್ಧರಾಗುವಂತೆ ಶಿಕ್ಷಣ ನೀಡಿದೆ.

ಹುಝೂರ್(ಅಬಿಅ) ಹೇಳಿದರು. ಇಸ್ಲಾಮಿನಲ್ಲಿ ನೆರೆಹೊರೆಯವರಿಗೆ ಸಂಬಂಧಿಸಿ ವಿಶಾಲ ಅರ್ಥ ಒಳಗೊಂಡಿದೆ. ಇದರಲ್ಲಿ ನಿಮ್ಮ ಜೊತೆ ಕೆಲಸ ಮಾಡುವವರು ನಿಮ್ಮ ಜದೀನದಲ್ಲಿರುವವರು, ಪ್ರಯಾಣದಲ್ಲಿ ಜೊತೆಯಾಗಿ ಕೂತಿರುವವರು ಸೇರಿದ್ದಾರೆ. ಇದರಲ್ಲಿ ಕೇವಲ ನಿಮ್ಮ ಮನೆಯ ಅಕ್ಕಪಕ್ಕದವರು ಮಾತ್ರ ಎನ್ನಲಿಲ್ಲ. ಬದಲು ಎಲ್ಲ ಜನರು ಇದರಲ್ಲಿ ಸೇರಿದ್ದಾರೆ. ರಸೂಲುಲ್ಲಾಹ್(ಸ) ಹೇಳಿದರು. ನಿಮ್ಮ ಅಕ್ಕಪಕ್ಕಗಳ 40 ಮನೆಗಳು ನೆರೆಹೊರೆಯವರಲ್ಲಿ ಸೇರಿರುತ್ತಾರೆ. ಅದೇ ರೀತಿ ನಾವು ಹೇಳಬಹುದು. ಈ ನಗರದ ಎಲ್ಲಾ ಜನರು ಈ ಮಸೀದಿಯಲ್ಲಿ ಅಥವಾ ಇದರಲ್ಲಿ ಆರಾಧನೆ ಮಾಡುವ ಎಲ್ಲ ನೆರೆಹೊರೆಯವರು ಸೇರಿದ್ದಾರೆಂದು, ನಮ್ಮ ನೆರೆಹೊರೆಯವರು ಮುಸಲ್ಮಾನರಾಗಲಿ, ಮುಸ್ಲಿಮೇತರರಾಗಲಿ ಅವರ ಬಗ್ಗೆ ಕಾಳಜಿ ವಹಿಸುವುದು ಅವರ ಹಕ್ಕುಗಳನ್ನು ರಕ್ಷಿಸುವುದು ಅನಿವಾರ್ಯವಾಗಿದೆ. ಅವರಲ್ಲಿ ಯಾವುದೇ ತರಹದ ಆತಂಕ ಬಾರದಂತೆ ನೋಡಿಕೊಳ್ಳುವುದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ. ಇದು ನಾವು ನಿಮ್ಮ ಮೇಲೆ ಮಾಡುವ ಉಪಕಾರವಲ್ಲ. ಬದಲಾಗಿ ಇದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ.

ರಸೂಲುಲ್ಲಾಹ್(ಸ) ಹೇಳುತ್ತಾರೆ. ನೆರೆಹೊರೆಯವರ ಹಕ್ಕುಗಳ ಕುರಿತು ಎಷ್ಟೊಂದು ಒತ್ತು ನೀಡಲಾಗಿದೆ ಎಂದರೆ ತನ್ನ ನೆರೆಹೊರೆಯವರಿಗೆ ಆಸ್ತಿ ಪಾಲು ನೀಡುವ ನಿರ್ದೇಶನವು ಬರಬಹುದೆಂದು ಅಂದಾಜಿಸಿದೆ.

ಹುಝೂರ್(ಅಬಿಅ) ಹೇಳಿದರು. ಇಲ್ಲಿ ಈ ಮಸೀದಿ ನಿರ್ಮಾಣವಾಗಿದೆ ಎಂದರೆ ಸಂಕ್ಷಿಪ್ತವಾಗಿ ಹೇಳಬಹುದು. ಇದರಿಂದ ನಮಗೆ ಕೇವಲ ಅಲ್ಲಾಹನ ಆರಾಧನೆಯ ಹಕ್ಕುಗಳ ಜವಾಬ್ದಾರಿ ಮಾತ್ರ ಹೆಚ್ಚಾಗುವುದಿಲ್ಲ. ಬದಲಾಗಿ ಅದರ ಜೊತೆಯಲ್ಲಿ ಸ್ಥಳಿಯ ಜನರ ಸೇವೆ ಮಾಡುವ ಹಾಗೂ ಸಮಾಜದಲ್ಲಿ ನಕರಾತ್ಮಕ ಪಾತ್ರ ವಹಿಸುವ ಜವಾಬ್ದಾರಿ ಎಷ್ಟೊ ಪಟ್ಟು ಹೆಚ್ಚಾಗಿರುತ್ತದೆ. ಇಲ್ಲಿಯ ಸ್ಥಳಿಯ ಅಹ್ಮದಿಯರು ಈ ನಗರದ ಎಲ್ಲ ಜನರನ್ನು ತಮ್ಮ ನೆರೆಹೊರೆಯರನ್ನಾಗಿ ಪರಿಗಣಿಸಬೇಕು ಮತ್ತು ಅವರ ಹಕ್ಕುಗಳ ರಕ್ಷಣೆ ತಮ್ಮ ಜವಾಬ್ದಾರಿ ಎಂದು ಭಾವಿಸಬೇಕು. ತಮ್ಮ ಎಲ್ಲ ಸಾಮರ್ಥ್ಯಗಳೊಂದಿಗೆ ಅವರ ಹಕ್ಕುಗಳನ್ನು ನೀಡುವುದು ತಮ್ಮ ಕರ್ತವ್ಯ ಎಂದು ಭಾವಿಸಿ ಪ್ರಯತ್ನ ಶೀಲರಾಗಬೇಕು. ನಮ್ಮ ಸಹಾಯದ ಅವಶ್ಯಕತೆ ಬಂದಲ್ಲಿ ನಮ್ಮನ್ನು ಸಂಪರ್ಕಿಸಬಹುದು. ನಾವು ಸಾಧ್ಯವಾದಷ್ಟು ಮಟ್ಟಿಗೆ ನಿಮಗೆ ನೆರವು ನೀಡುವ ಆಶ್ವಾಸನೆ ನೀಡುತ್ತೇವೆ. ನನಗೆ ಪ್ರಬಲ ವಿಶ್ವಾಸವಿದೆ. ಇಲ್ಲಿಯ ಸ್ಥಳಿಯ ಅಹ್ಮದಿಯರು ಸ್ಥಳಿಯ ಸಮಾಜದ ಪ್ರತಿ ತಮ್ಮ ಹೊಣೆಗಾರಿಕೆಯನ್ನು ಪ್ರಮಾಣಿಕವಾಗಿ ಪಾಲಿಸುವರು ಮತ್ತು ಸದಾಕಾಲ ಈ ನಗರದ ಅಭಿವೃದ್ಧಿಯಲ್ಲಿ ಭಾಗಿಯಾಗುವರು. ಈ ನಗರದ ಒಲಿತು ಬಯಸುವವರಾಗುವರು. ತಮ್ಮ ಸಮಾಜದ ಏಳಿಗೆಗಾಗಿ ಶ್ರಮಿಸುವರು.

ಹುಝೂರ್(ಅಬಿಅ) ಹೇಳಿದರು. ಈ ಎಲ್ಲಾ ವಿಷಯಗಳ ಬೆಳಕಿನಲ್ಲಿ, ಈ ಸಂದರ್ಭದಿಂದ ಪ್ರಯೋಜನ ಪಡೆಯುವತ್ತ ಸ್ಥಳಿಯ ಅಹ್ಮದಿ ಮುಸ್ಲಿಮ್ ಬಾಂಧವರೂ ಗಮನಹರಿಸುವವರು ಮತ್ತು ತಮ್ಮ ಉತ್ತಮ ನಡತೆಯನ್ನು ಪ್ರದರ್ಶಿಸುತ್ತಾ ಇಸ್ಲಾಮಿನ ವಾಸ್ತವಿಕ ಶಿಕ್ಷಣದ ಮೇಲೆ ಭಕ್ತಿಯುಳ್ಳವರಾಗಿ ಪ್ರಾಮಾಣಿಕತೆಯಿಂದ ತಮ್ಮ ನೆರೆಹೊರೆಯವರ ಮತ್ತು ಇತರ ಸ್ಥಳಿಯ ಜನರಲ್ಲಿ ಇಸ್ಲಾಮಿನ ಬಗ್ಗೆ ಇರುವ ಆತಂಕ ಭಯವನ್ನು ಹೋಗಲಾಡಿಸಲು ಪ್ರಯತ್ನಪಡುವರು. ಇನ್‌ಶಾ ಅಲ್ಲಾಹ್.

ಹುಝೂರ್(ಅಬಿಅ) ಹೇಳಿದರು. ಈಗ ಈ ಮಸೀದಿಯು ಉದ್ಘಾಟನೆಯಾಗಿದೆ. ನನಗೆ ತುಂಬ ವಿಶ್ವಾಸವಿದೆ. ಈ ಕಾರಣದಿಂದ ನಮ್ಮ ಜಮಾಅತ್ ಮತ್ತು ಇಲ್ಲಿಯ ಸ್ಥಳಿಯ ಜನರು ಇನ್ನೂ ಸಮೀಪಕ್ಕೆ ಬರುವವರು ಮತ್ತು ನಮ್ಮ ಜೊತೆ ಮೈತ್ರಿ ಇನ್ನು ಗಟ್ಟಿಗೊಳಿಸುವವರು. ಪರಸ್ಪರ ಸೌಹಾರ್ಧತೆಯಲ್ಲಿ ಪ್ರೀತಿಯಲ್ಲಿ ಇನ್ನೂ ಪ್ರಗತಿ ಸಾಧಿಸುವರು. ನೀವು ಈ ಮಸೀದಿಯನ್ನು ಶಾಂತಿ ಮತ್ತು ಮಾನವ ಸೇವೆಯ ಒಂದು ಪ್ರತೀಕ ಎಂಬಂತೆ ಭಾವಿಸುವಿರಿ. ಈಗ ಮೊದಲಿಗಿಂತ ಹೆಚ್ಚು ನಮ್ಮ ಕರ್ತವ್ಯವಾಗಿದೆ. ಮುಸ್ಲಿಮರಾಗಲಿ, ಅಮುಸ್ಲಿಮರಾಗಲಿ ಧಾರ್ಮಿಕ ಭಿನ್ನತೆಗಳನ್ನು ಬದಿಗೊತ್ತಿ ಶಾಂತಿಸ್ಥಾಪನೆಗಾಗಿ ಒಟ್ಟುಗೂಡಿ ಶ್ರಮಿಸುವವರು ಮಾನವೀಯತೆಯ ಹೆಸರಿನಲ್ಲಿ ಐಕ್ಯಗೊಳ್ಳುವರು ಹಾಗೂ ತಮ್ಮ ದೇಶದ ಒಳಿತಿಗಾಗಿ ಕಾರ್ಯ ನಿರ್ವಹಿಸುವವರು. ಲೋಕದಲ್ಲಿ ಶಾಂತಿ ಸ್ಥಾಪಿಸಲು ಪೂರ್ಣ ಪ್ರಮಾಣದ ಪ್ರಯತ್ನ ಮಾಡುವರು. ಅಲ್ಲಾಹನು ಮಾನವಕುಲವನ್ನು ಇವೆಲ್ಲ ಸಾಧಿಸುವಂತೆ ದಯಪಾಲಿಸಲಿ ಮತ್ತು ವಿವೇಕ ಶೀಲರನ್ನಾಗಿ ಮಾಡಲಿ ಆಮೀನ್.

ಕೊನೆಯಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಈ ಮಸೀದಿಯು ಎಂದೆಂದಿಗೂ ಪ್ರಕಾಶಿಸುವ ಗೋಪುರವಾಗಿರಲಿ. ಇದರಿಂದ ಸರ್ವತ್ರ ಮಾನವೀಯ ಸೌಹಾರ್ಧತೆ, ಶಾಂತಿ ಹಾಗೂ ಪ್ರೀತಿಯ ಕಾರಂಜಿ ಚಿಮ್ಮಲಿ ಆಮೀನ್. ಈ ಪದಗಳೊಂದಿಗೆ ಈ ಪವಿತ್ರ ಸಮಾರಂಭದಲ್ಲಿ ಭಾಗವಹಿಸಿದಕ್ಕೆ ಮತ್ತೊಮ್ಮೆ ನಿಮಗೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಂತಿಮವಾಗಿ ಹುಝೂರ್(ಅಬಿಅ) ದುಆ ಮಾಡಿಸಿದರು. ಅದರಲ್ಲಿ ಎಲ್ಲ ಅತಿಥಿಗಳು ತಮ್ಮದೇ ಆದ ರೀತಿಯಲ್ಲಿ ಭಾಗವಹಿಸಿದರು.

ಅನಂತರ ಈ ಸಮಾರಂಭದಲ್ಲಿ ಭಾಗವಹಿಸಿದ ಎಲ್ಲ ಅತಿಥಿಗಳು ಹುಝೂರ್(ಅಬಿಅ) ರವರ ಜೊತೆಯಲ್ಲಿ ಊಟ ಮಾಡಿದರು. ಊಟವಾದ ನಂತರ ಕೆಲ ಅತಿಥಿಗಳು ಹುಝೂರ್(ಅಬಿಅ) ರೊಡನೆ ಭೇಟಿಯಾಗುವ ಭಾಗ್ಯ ಪಡೆದರು. ಅನಂತರ ಅವರು ಕೆಲ ಸಮಯಕ್ಕಾಗಿ ಮಹಿಳೆಯರ ಮಾರ್ಕಿಗೆ ಆಗಮಿಸಿದರು.

ಕಾರ್ಯಕ್ರಮದನ್ವಯ 8:30 ಕ್ಕೆ ಹುಝೂರ್(ಅಬಿಅ) ಮಸ್ಜಿದ್ ಬೈತುಲ್ ಆಫಿಯತ್ ಆಗಮಿಸಿ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಮರಳಿ, ನನ್‌ಸ್ಪೇಟ್‌ನತ್ತ ಪ್ರಯಾಣ ಬೆಳೆಸಿದರು. 9 ಗಂಟೆ 45 ನಿಮಿಷಕ್ಕೆ ಹುಝೂರ್ "ಬೈತುನ್ನುರ್ ನನ್‌ಸ್ಪೇಟ್ ತಲುಪಿ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ಅತಿಥಿಗಳ ಅನಿಸಿಕೆಗಳು:**

ಹುಝೂರ್(ಅಬಿಅ) ರವರ ಈ ಸಂಬೋಧನೆಯು ಈ ಸಮಾರಂಭದಲ್ಲಿ ಭಾವಹಿಸಿದ ಅತಿಥಿಗಳ ಮೇಲೆ ಗಾಢವಾದ ಪರಿಣಾಮ ಬೀರಿತು. ಕೆಲ ಅತಿಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ.

ಅಲ್ಮಿರೆ ಚರ್ಚಿನ ಚೇರ್‌ಮನ್ ಹಾಯೋತೇಝುಲ್ ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ನಿಮ್ಮ ಜಮಾಅತಿನ ಸಂದೇಶವು ಶಾಂತಿಯ ಸಂದೇಶವಾಗಿದೆ. ನಿಮ್ಮ ಖಲೀಫರು ಶಾಂತಿ ಮತ್ತು ಸಮಾನತೆ ಕುರಿತು ಅತ್ಯುತ್ತಮ ಭಾಷಣ ಮಾಡಿದ್ದಾರೆ. ಅಲ್ಮಿರೆಯಲ್ಲಿ ಮೊದಲು ಕೆಥೋಲಿಕ್ಸ್ ಮತ್ತು ಪ್ರೋಟೆಸ್ಟನ್ಸ್ ಕೂಡಿ ಶಾಂತಿಯಿಂದ ಬಾಳುತ್ತಿದ್ದರು. ನಮ್ಮ ಜೊತೆಗೂಡಿ ಅಹ್ಮದಿಯರೂ ಶಾಂತಿಯಿಂದ ಬಾಳುವರು.

ಲೋಕಲ್ ಡಚ್‌ರೊಬ್ಬರಾದ ಯೆನಾಸೇ ಸಾಹಿಬ್ ಹೇಳಿದರು. ನನಗೆ ಕೆಲ ಸಮಯ ಹಿಂದೆ ಉದ್ಘಾಟನೆಯ ಆಮಂತ್ರಣ ಸಿಕ್ಕಿತ್ತು. ನಿಮ್ಮ ಜಮಾಅತಿನ ಒಂದು ಉತ್ತಮ ರೀತಿ ಏನೆಂದರೆ ನೀವು ಇತರರೊಡನೆ ಮಾತನಾಡಲು ಸಿದ್ಧರಿರುತ್ತೀರಿ. ನಿಮ್ಮ ಖಲೀಫರ ಸಂದೇಶ ತುಂಬ ಸ್ಪಷ್ಟವಾಗಿತ್ತು. ಇನ್‌ಶಾಲ್ಲಾಹ್ ಮತ್ತೆ ಈ ಮಸೀದಿಗೆ ಬರುವೆನು.

ಅರಬ್ ಅತಿಥಿಯೊಬ್ಬರು ಅಲ್‌ವಲೀದ್ ಸಾಹಿಬ್ ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ನಿಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತುಂಬ ಹಿತವೆನಿಸಿದೆ. ಕೆಲ ಅವಧಿಯಿಂದ ನಿಮ್ಮ ಜಮಾಅತಿನ ಬಗ್ಗೆ ಪರಿಚಯ ಪಡೆಯುತ್ತಿದ್ದೇನೆ. ಲೋಕಕ್ಕೆ ನಿಮ್ಮ ಜಮಾಅತಿನ ಶಾಂತಿಯ ಸಂದೇಶದ ಅವಶ್ಯಕತೆ ಇದೆ. ನಿಮ್ಮ ಖಲೀಫರ ಭಾಷಣ ನನಗೆ ತುಂಬ ಮೆಚ್ಚುಗೆಯಾಗಿದೆ. ಈ ಮಸೀದಿಯು ಶಾಂತಿಯ ಪಾತ್ರ ವಹಿಸುವುದು.

ಡಚ್ ಮಹಿಳೆಯೊಬ್ಬರಾದ ಹೇಇ ಸಾಹಿಬಾ ಹೇಳಿದರು. ಖಲೀಫರ ಸಂದೇಶ ಶಾಂತಿಯ ಸಂದೇಶವಾಗಿದೆ. ನಾನು ಅಲ್ಮಿರೆಯ ನಿವಾಸಿಯಾಗಿದ್ದೇನೆ. ನನಗೆ ಮಸೀದಿಯ ಉದ್ಘಾಟನಾ ಸಮಾರಂಭಕ್ಕೆ ಆಮಂತ್ರಿಸಿದ್ದು ಹಿತವೆನಿಸಿದೆ. ನಿಮ್ಮ ಜಮಾಅತ್ ಆತಿಥ್ಯ ಪ್ರಧಾನವಾಗಿದೆ. ನಿಮ್ಮ ಖಲೀಫರ ಶಾಂತಿಯ ಸಂದೇಶವು ನಮ್ಮ ಕ್ರೈಸ್ತ ಶಿಕ್ಷಣದಿಂದ ತುಂಬ ಸಾಮ್ಯತೆ ಹೊಂದಿದೆ. ನಿಮ್ಮ ಜಮಾಅತ್ ನಮ್ಮ ಜೊತೆ ಸೇರಿ ಶಾಂತಿ ಸ್ಥಾಪಿಸುವುದೆಂದು ನಾನು ಆಶಿಸುತ್ತೇನೆ.

ಚೇರ್ ಪರ್ಸನ್ ಮನ್‌ದೋ ಯೋನಿದೊ (NGO) ಯಾಟರಿಷಾ ಹಾಫೆ ಮಾನ್ ಸಾಹಿಬಾ ಹೇಳಿದರು. ನಾನು ದಿಹೇಗ್‌ನಿಂದ ಬಂದಿರುತ್ತೇನೆ. ನಿಮ್ಮ ಈ ಕಾರ್ಯಕ್ರಮದ ಆಯೋಜನೆ ನನಗೆ ಉತ್ತಮವೆನಿಸಿದೆ. ನಾನು ಈ ಮೊದಲೇ ನಿಮ್ಮ ಖಲೀಫರೊಡನೆ ಭೇಟಿಯಾಗಿರುತ್ತೇನೆ. ನನ್ನ ಭಾವನೆಯಲ್ಲಿ ನಿಮ್ಮ ಖಲೀಫ ಮತ್ತು ನಿಮ್ಮ ಜಮಾಅತ್ ನಮ್ಮ ಜೊತೆ ಸೇರಿ ಇಂದಿನ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಬಹುದೆಂದು ಭಾವಿಸುತ್ತೇನೆ.

ಅರಬ್ ಅತಿಥಿಯೊಬ್ಬರಾದ ಝುಕರಿಯಾ ಅಲ್‌ಅಝ್‌ಹರ್ ಸಾಹೇಬ್ ತಮ್ಮ ಭಾವನೆಗಳನ್ನು ಹೀಗೆ ಬಹಿರಂಗಪಡಿಸಿದರು. ಇಂದಿನ ಕಾರ್ಯಕ್ರಮವು ತುಂಬ ಒಳ್ಳೆಯದಾಗಿತ್ತು. ನಿಮ್ಮ ಖಲೀಫರ ಭಾಷಣ ಅತ್ಯುತ್ತಮವಾಗಿತ್ತು. ನಾವು ಶಾಂತಿ ಬಯಸುವುದಾದರೆ ನಮಗೆ ಅವರ ಭಾಷಣದ ಮೇಲೆ ಅವಶ್ಯವಾಗಿ ನಡೆದುಕೊಳ್ಳಬೇಕಾಗಿದೆ. ಕಾರ್ಯಕ್ರಮದ ಪ್ರಾರಂಭದಲ್ಲಿ ಪವಿತ್ರ ಖುರ್‌ಆನಿನ ಪಠಣ ಮಾಡಲಾಗಿದೆ. ಅದು ನನಗೆ ತುಂಬ ಮೆಚ್ಚುಗೆಯಾಯಿತು.

**(ಮುಂದುವರಿಯುವುದು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕಿವಿ, ಮೂಗು, ಕೂದಲು ಮುಂತಾದವುಗಳು ಖಲ್ಜ್‌ಗೆ ಸೇರಿವೆ. ಹಾಗೆಯೇ ಖಲ್ಜ್ ಆಂತರಿಕ ಸೃಷ್ಟಿ ಅಥವಾ ಆತ್ಮ ಸಂಸ್ಕರಣದ ಹೆಸರಾಗಿದೆ. ಅದರಂತೆಯೇ ಆಂತರಿಕ ಶಕ್ತಿಗಳು ಅವು ಮನುಷ್ಯ ಮತ್ತು ದನಗಳನ್ನು ಬೇರ್ಪಡಿಸುತ್ತವೆ. ಅವೆಲ್ಲ ಖುಲ್ಜ್‌ನಲ್ಲಿ ಸೇರಿರುತ್ತವೆ. ವಿವೇಕ ಚಿಂತನೆ ಇತ್ಯಾದಿ ಎಲ್ಲ ಶಕ್ತಿಗಳು ಖಲ್ಜ್‌ನಲ್ಲಿ ಒಳಗೊಂಡಿರುತ್ತವೆ.

ಖುಲ್ಖ್‌ನಿಂದ ಮನುಷ್ಯನು ತನ್ನ ಮಾನವತೆಯನ್ನು ಸುಧಾರಿಸಿಕೊಳ್ಳುತ್ತಾನೆ. ಮನುಷ್ಯನಿಗೆ ಕರ್ತವ್ಯಗಳು ಇರದಿದ್ದರೆ ಒಪ್ಪಬೇಕಾಗುತ್ತದೆ. ಅವನು ಮನುಷ್ಯನೇ? ಕತ್ತೆನೇ? ಅಥವಾ ಏನು? ಎಂದು ಖುಲ್ಖ್‌ನಲ್ಲಿ ವ್ಯತ್ಯಸ ಬಂದು ಬಿಟ್ಟರೆ ಇದೇ ಪರಿಸ್ಥಿತಿ ಆಗಿರುವುದು. ಉದಾಹರಣೆಗೆ ವಿವೇಕ ಶೂನ್ಯರಾದರೆ ಅವಿವೇಕಿ ಎಂದಾಗುತ್ತಾನೆ. ಕೇವಲ ಬಾಹ್ಯರೂಪದಲ್ಲಿ ಮಾತ್ರ ಮನುಷ್ಯನೆಂದು ಹೇಳಿಕೊಳ್ಳಬಹುದು. ಆದ್ದರಿಂದ ನೀತಿವಂತಿಕೆ ಎಂದರೆ ಅಲ್ಲಾಹನ ಸಂತೃಪ್ತಿ (ಅದು ರಸೂಲುಲ್ಲಾಹ್(ಸ) ಅವರ ಜೀವನದಲ್ಲಿ ಪರಿಪೂರ್ಣ ರೀತಿಯಲ್ಲಿ ಕಾಣಬಹುದಾಗಿದೆ) ಪಡೆಯಬಹುದಾಗಿದೆ. ಆದ್ದರಿಂದ ರಸೂಲುಲ್ಲಾಹ್(ಸ) ರವರ ಜೀವನ ಮಾದರಿಯನ್ನು ಅನುಸರಿಸುವ ಪ್ರಯತ್ನಪಡುವುದು ಅವಶ್ಯವಾಗಿದೆ. ಇದು ನೈತಿಕತೆಯ ಬುನಾದಿಯಾಗಿದೆ. ಇದರಲ್ಲಿ ಎಡವಿದರೆ ಕಟ್ಟಡ ನಿರ್ಮಾಣವಾಗದು. ನೀತಿ ಎಂಬುದು ಒಂದು ಇಟ್ಟಿಗೆಯನ್ನು ಇನ್ನೊಂದು ಇಟ್ಟಿಗೆಯ ಮೇಲೆ ಇಡುವುದಾಗಿದೆ. ಒಂದೇ ಒಂದು ಇಟ್ಟಿಗೆ ಡೊಂಕಾದರೆ ಇಡೀ ಗೋಡೆ ಡೊಂಕಾಗಿಯೇ ಇರುತ್ತದೆ. ಒಬ್ಬನು ಎಷ್ಟು ಸಮಂಜಸವಾಗಿ ಹೇಳಿದ್ದಾನೆ.

**'ಖಿಷ್ತ್ ಅವ್ವಲ್ ಚೂಂ ನಿಹದ್ ಮಮಾರ್ ಕಜ್**
**ತಾಸುರೈಯ ರುವದ್ ದೀವಾರ್ ಕಜ್'**

ಈ ಮಾತುಗಳನ್ನು ಲಕ್ಷ್ಯವಹಿಸಿ ಕೇಳಬೇಕಾಗಿದೆ. ಹೆಚ್ಚಿನವರನ್ನು ನಾನು ನೋಡಿರುತ್ತೇನೆ. ಅವರು ಉದಾರಿಗಳಾಗಿರುತ್ತಾರೆ. ಆದರೆ ಅದರ ಜೊತೆಯಲ್ಲಿ ಕೋಪ ಮತ್ತು ದು:ಖಗಳನ್ನು ಹೊಂದಿರುತ್ತಾರೆ. ಕೆಲವರು ಸಹನಾಶೀಲರಾಗಿರುತ್ತಾರೆ. ಆದರೆ ಜಿಪುಣರಾಗಿರುತ್ತಾರೆ. ಕೆಲವರು ಕೋಪ ತಾಪ ಸ್ಥಿತಿಯಲ್ಲಿ ಹೊಡೆದಾಟ ಮಾಡುತ್ತಾರೆ. ಆದರೆ ನಮ್ರತೆ ಮತ್ತು ವಿನಯ ಹೊಂದಿರುವುದಿಲ್ಲ ಕೆಲವರು ವಿನಯ ನಮ್ರತೆಯನ್ನು ಹೊಂದಿರುತ್ತಾರೆ ಆದರೆ ಶೌರ್ಯ ಹೊಂದಿರುವುದಿಲ್ಲ. ಪ್ಲೇಗ್ ಅಥವಾ ಮಹಾಮಾರಿ ರೋಗದ ಹೆಸರು ಕೇಳುತ್ತಲೇ ಬೀದಿ ಪ್ರಾರಂಭವಾಗುತ್ತದೆ. ನಾನು ಈ ರೀತಿಯ ಶೌರ್ಯ ಹೊಂದಿದವರನ್ನು ಅವಿಶ್ವಾಸಿ ಎನ್ನುವುದಿಲ್ಲ. ಸಹಾಬರಲ್ಲಿಯೂ ಕೆಲವರಲ್ಲಿ ಯುದ್ಧ ಮಾಡುವ ಶಕ್ತಿ ಮತ್ತು ಜ್ಞಾನವಿರಲಿಲ್ಲ. ರಸೂಲುಲ್ಲಾಹ್(ಸ) ಅವರನ್ನು ಅಂಗವಿಕಲರೆಂದು ಪರಿಗಣೀಸುತ್ತಿದ್ದರು. ಇಂತಹ ನೀತಿಗಳು ಬಹಳಷ್ಟಿವೆ. ನಾನು ಸರ್ವಧರ್ಮ ಸಮ್ಮೇಳನದ ಭಾಷಣದಲ್ಲಿ ಇದನ್ನೆಲ್ಲಾ ಸ್ಪಷ್ಟಪಡಿಸಿದ್ದೇನೆ. ಪ್ರತಿಯೊಬ್ಬ ಮನುಷ್ಯನು ಪರಿಪೂರ್ಣ ಗುಣಗಳನ್ನು ಹೊಂದಿರುವುದಿಲ್ಲ ಮತ್ತು ಅದರಿಂದ ವಂಚಿತನೂ ಅಲ್ಲ.

**(ಮಲ್‌ಫೂಝಾತ್ ಸಂಪುಟ–1, ಪುಟ–112–114, ಮುದ್ರಣ 2018 ಖಾದಿಯಾನ್)**

### ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ:–

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಪೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಆ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

## ನಝಾರತ್ ತಅ್‌ಲೀಮಿನ ವತಿಯಿಂದ ಆಯೋಜಿಸಿದ ಪ್ರಬಂಧ ಸ್ಪರ್ಧೆಯ ಫಲಿತಾಂಶದ ಪ್ರಕಟಣೆ:

ಭಾರತದ ಎಲ್ಲಾ ಅಹ್ಮದಿ ವಿದ್ಯಾರ್ಥಿ, ವಿದ್ಯಾರ್ಥಿನಿ ಹಾಗೂ ಮಹಿಳೆ ಮತ್ತು ಪುರುಷರಲ್ಲಿ ಪ್ರಬಂಧವನ್ನು ಬರೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಅವರಲ್ಲಿ ಹುದುಗಿರುವ ಪ್ರತಿಭೇಯನ್ನು ಹೊರತರುವುದಕ್ಕಾಗಿ ಪ್ರತಿ ವರ್ಷ ನಝಾರತ್ ತಅ್‌ಲೀಮ್ ಖಾದಿಯಾನಿನ ವತಿಯಿಂದ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗುತ್ತದೆ.

ಈ ವರ್ಷ 2019–20ರಲ್ಲಿ ಪ್ರಬಂಧ ಸ್ಪರ್ಧೆಗಾಗಿ ಶೀರ್ಷಿಕೆಯು ಹೀಗಿತ್ತು:

**"ಒಬ್ಬ ಸಕ್ರಿಯ ದಾಯಿ ಇಲಲ್ಲಾಹ್‌ನ (ಅಲ್ಲಾಹನೆಡೆಗೆ ಕರೆಯುವವನ) ಹೊಣೆಗಾರಿಕೆ ಹಾಗೂ ಅವನ ಕರ್ತವ್ಯಗಳು ಹುಝೂರ್ ಅಯ್ಯದಹುಲ್ಲಾಹು ತಅಲ ರವರ ಉಪದೇಶಗಳ ಅಡಿಯಲ್ಲಿ"**

ಈ ಪ್ರಬಂಧದಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನಗಳಿಸಿದ ವಿಜೇತರ ಹೆಸರು ಪ್ರಕಟಗೊಳಿಸಲಾಗುತ್ತಿದೆ. ಅದರ ವಿವರಗಳು ಹೀಗಿವೆ. ಮುಂದಿನ ವರ್ಷ 2020–2021ಗೆ ಪ್ರಬಂಧಕ್ಕಾಗಿ ಶೀಷಿಕೆಯ ಪ್ರಕಟಣೆಯು ಅತೀ ಶೀಘ್ರದಲ್ಲಿ ಪ್ರಕಟಿಸಲಾಗವುದು. ಎಲ್ಲಾ ಅಹ್ಮದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಈ ಸ್ಪರ್ಧೆಯಲ್ಲಿ ಭಾಗವಹಿಸಲು ವಿನಂತಿಸಲಾಗಿದೆ.

### ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರ ಫಲಿತಾಂಶ ವರ್ಷ 2018–19

| | | | | |
|---|---|---|---|---|
| 1. | ಮುಕರ್ರಮ ಸರ್ವತ್ ನೂರ್ ಸಯೀದ್ ಸಾಹಿಬ | ಖಾದಿಯಾನ್ | ಪ್ರಥಮ | 5000/– |
| 2. | ಮುಕರ್ರಮ ನಜ್ಮ ತಾರಿಖ್ ಸಾಹಿಬ | ಖಾದಿಯಾನ್ | ದ್ವಿತೀಯ | 4000/– |
| 3. | ಮುಕರ್ರಮ ಗಝಾಲ ಕೌಕಬ್ ಸಾಹಿಬ | ಹೈದರಬಾದ್ | ತೃತೀಯ | 3000/– |
| 4. | ಮುಕರ್ರಮ ಆಯಿಶಾ ಸಲೀಮ್ ಸಾಹಿಬ | ಪಾಲ್‌ಕಾಟ್ | ವಿಷೇಶ | 1000/– |

(ನಾಝಿರ್ ತಅ್‌ಲೀಮ್ ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್)

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 20 February 2020 Issue No. 06

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಸರ್ಕುಲರ್ ಸಂಖ್ಯೆ 05ರ ವರದಿಯ ಉಳಿದ ಭಾಗ)**

ಅದೇ ಪತ್ರಕರ್ತರು ಪ್ರಶ್ನೆ ಮಾಡಿದರು: ಮುಸ್ಲಿಮೇತರರೂ ಮಸೀದಿಯಲ್ಲಿ ಬಂದು ಆರಾಧಿಸಬಹುದೇ? ಆಗ ಹುಝೂರ್(ಅ.ಬಿ.ಅ.) ಹೇಳಿದರು. ಇಸ್ಲಾಮ್ ಸ್ಥಾಪಕರಾದ ಪ್ರವಾದಿ ಮುಹಮ್ಮದ್(ಸ) ರವರ ಕಾಲದಲ್ಲಿ ಅವರ ಬಳಿ ನಜ್‌ರಾನಿನ ಒಂದು ಕ್ರೈಸ್ತರ ತಂಡ ಬಂದಿತ್ತು. ಅವರು ಪೈಗಂಬರ್(ಸ) ಜೊತೆ ಮಾತುಕತೆಯಲ್ಲಿ ತೊಡಗಿದ್ದರು. ಅಷ್ಟರಲ್ಲಿ ಅವರು ಭಾವಿಸತೊಡಗಿದರು. ಇವರು ವಿಚಾರಿತರಾಗುತ್ತಿದ್ದಾರೆ ಮತ್ತು ನೆಮ್ಮದಿ ಇಲ್ಲದಂತೆ ಭಾಸವಾಗುತ್ತಿದೆ ಎಂಬ ಭಾವಿಸಿ ಅವರೊಡನೆ ಸಮಸ್ಯೆ ಏನೆಂದು ವಿಚಾರಿಸಿದರು? ಆ ತಂಡದ ಸದಸ್ಯರು ಹೇಳಿದರು. ನಮಗೆ ಆರಾಧನೆಯ ಸಮಯವಾಗಿದೆ. ಬಹುಶಃ ಅದು ರವಿವಾರವಾಗಿತ್ತು. ನಮಗೆ ನಮ್ಮ ಧರ್ಮದ ರೀತಿಯಲ್ಲಿ ಆರಾಧನೆ ಮಾಡಲು ಸ್ಥಳ ಕಾಣುತ್ತಿಲ್ಲ. ಆಗ ರಸೂಲೆ ಕರೀಂ(ಸ) ಹೇಳಿದರು. ನೀವು ನಮ್ಮ ಮಸೀದಿಯಲ್ಲಿ ಕುಳಿತುಕೊಂಡಿರುತ್ತೀರಿ. ನೀವು ಇಲ್ಲಿ ತಮ್ಮ ಧರ್ಮಾನುಸಾರ ಆರಾಧನೆ ಮಾಡಬಹುದಾಗಿದೆ.

ಹುಝೂರ್(ಅ.ಬಿ.ಅ.) ಹೇಳಿದರು. ಮಸೀದಿಗಳು ಆರಾಧನೆ ಮಾಡುವ ಉದ್ದೇಶದಿಂದ ಕಟ್ಟಲಾಗುತ್ತದೆ. ಯಾರಾದರೂ ಏಕದೇವನ ಆರಾಧನೆ ಮಾಡಬಹುದಾದರೆ ಅದಕ್ಕೆ ಅನುಮತಿ ಇದೆ. ಇಲ್ಲಿ ವಿಗ್ರಹಗಳಂತೂ ಇಡಲಾಗುವುದಿಲ್ಲ. ಆದ್ದರಿಂದ ನೀವು ಏಕದೇವನ ಆರಾಧನೆ ಮಾಡಬಯಸುವುದಾದರೆ ಮಾಡಬಹುದಾಗಿದೆ. ಆದ್ದರಿಂದ ಪೈಗಂಬರ್(ಸ) ಕ್ರೈಸ್ತರಿಗೆ ತಮ್ಮದೇ ರೀತಿಯಲ್ಲಿ ಆರಾಧನೆ ಮಡಲು ಅನುಮತಿ ನೀಡಿದ್ದರು.

Press conference ನಂತರ ಹುಝೂರ್(ಅ.ಬಿ.ಅ.) ಮಸೀದಿಯೊಂದಿಗೆ ಇದ್ದ ಕಚೇರಿಗಳ, ಮಿಷನ್ ಹೌಸ್ ಮತ್ತು ವಿವಿಧ ಸ್ಥಳಗಳ ಪರಿಶೀಲನೆ ನಡೆಸಿದರು.

ಮಸೀದಿ ಭಾಗದ ಒಟ್ಟು ವಿಸ್ತೀರ್ಣ 1683 ಚ.ಮೀ ಇದೆ. ಈ ಭೂಭಾಗ ಡಿಸೆಂಬರ್ 2012 ರಲ್ಲಿ 2 ಲಕ್ಷ 76 ಸಾವಿರ ಯೂರೋಗಳಲ್ಲಿ ಖರೀದಿಸಲಾಗಿತ್ತು ಮತ್ತು 2014 ರಲ್ಲಿ ಈ ಭೂಭಾಗ ಜಮಾಅತ್ತಿನ ಹೆಸರಿನಲ್ಲಿ ರಿಜಿಸ್ಟ್ರೇಷನ್ ಮಾಡಿಸಲಾಯಿತು.

7 ಅಕ್ಟೋಬರ್ 2015 ರಂದು ಹುಝೂರ್(ಅ.ಬಿ.ಅ.) ಅವರು ತಮ್ಮ ಹಾಲೆಂಡ್ ಪ್ರವಾಸದ ನಡುವೆ "ಮಸ್ಜಿದ್ ಬೈತುಲ್ ಆಫಿಅತ್' ಗೆ ಅಡಿಪಾಯ ಹಾಕಿದ್ದರು. ಸೆಪ್ಟೆಂಬರ್ 2016 ರಲ್ಲಿ ಅದಿಕೃತವಾಗಿ ಇದರ ನಿರ್ಮಾಣಕಾರ್ಯ ಪ್ರಾರಂಭಿಸಲಾಯಿತು. ಮಸೀದಿ ನಿರ್ಮಾಣಗೊಳ್ಳುತ್ತಿರುವ ಭಾಗದ ವಿಸ್ತೀರ್ಣ 658 ಚ.ಮೀ ಇದೆ. ಈ ಮಸೀದಿಯು ಎರಡು ಅಂತಸ್ತುಗಳನ್ನು ಹೊಂದಿದೆ. ಮೀನಾರಿನ ಎತ್ತರ 18 1/2 ಮೀ ಇದೆ. ಮಸೀದಿಯ ಗುಂಬಜ್ ದೊಡ್ಡಗಾತ್ರದಲ್ಲಿದ್ದರೆ ಅದು ಫೈಬರ್ ಗ್ಲಾಸಿನಿಂದ ತಯಾರಿಸಲಾಗಿದೆ. ಈ ಗುಂಬಜ್ ಅಹ್ಮದಿಯಾ ಆರ್‌ಕಿಟೆಕ್ಟರ್ ಆನ್ಡ್ ಇಂಜಿನಿಯರ್ಸ್ ಅಸೋಸಿಯೇಷನ್ ಪಾಕಿಸ್ತಾನ ತಯಾರಿಸಿ ಕಳುಹಿಸಿದ್ದರು.

ಒಂದು multi purpose ಸಭಾಂಗಣವು ನಿರ್ಮಿಸಲಾಗಿದೆ. ಮಸೀದಿ ಮತ್ತು ಮೌಲ್ವಿ ಕ್ವಾಟರ್ಸ್, ಸಭಾಂಗಣ ಸೇರಿ ಎರಡು ನೂರಕ್ಕಿಂತ ಹೆಚ್ಚು ಜನರು ನಮಾಝ್ ನಿರ್ವಹಿಸಬಹುದಾಗಿದೆ. ಮುರಬ್ಬಿ ಹೌಸ್ ವಿಸ್ತೀರ್ಣ 111 ಚ.ಮೀ ಇದೆ. ಇದರಲ್ಲಿ 3 ಹಾಸಿಗೆ ಕೋಣೆಗಳು ಅಲ್ಲದೇ ಅಡುಗೆ ಕೋಣೆ ಮತ್ತು 2 ವಾಷ್‌ರೂಮ್ಸ್ ಇದೆ.

ಮಲ್ಟಿ ಪರ್ಪಸ್ ಸಭಾಂಗಣದ ವಿಸ್ತೀರ್ಣ 525 ಚ.ಮೀ ಇದೆ. ನೆಲ ಮಹಡಿಯಲ್ಲಿ ಸ್ಥಳೀಯ ಜಮಾಅತ್‌ಗೋಸ್ಕರ Technical area, ಜಮಾಅತಿನ ಕಿಚನ್, ಒಂದು store ಮತ್ತು 4 ಶೌಚಾಲಯಗಳಿವೆ. ಜೊತೆಯಲ್ಲಿ ವುಝುಗೆ ಮೊದಲು ಸ್ಥಳವಾಕಾಶ ಒದಗಿಸಲಾಗಿದೆ. ಅದೇ ರೀತಿ ಲಜ್ನ ವಿಭಾಗದಲ್ಲೂ ಒಂದು Office ಮತ್ತು 4 ಶೌಚಾಲಯಗಳು ಮತ್ತು ವುಝು ಮಾಡಲು ಸ್ಥಳ ಒದಗಿಸಲಾಗಿದೆ. ಮಸೀದಿಯ ಹೊರಭಾಗದಲ್ಲಿ Parking ಗೋಸ್ಕರವೂ ಸ್ಥಳವಾಕಾಶ ಮಾಡಿಕೊಡಲಾಗಿದೆ. ಈ ಮಸೀದಿಯ ನಿರ್ಮಾಣ ಕಾರ್ಯಗಳಲ್ಲಿ ಆದ ಒಟ್ಟು ಖರ್ಚು ಸುಮಾರು 18 ಲಕ್ಷ 81 ಸಾವಿರ ಯೂರೋ ಆಗಿರುತ್ತದೆ.

### ಮಸೀದಿಯ ಉದ್ಘಾಟನಾ ಸಂದರ್ಭದಲಿ ಒಂದು ವಿಶೇಷ ಸಮಾರಂಭದ ಆಯೋಜನೆ

ಮಸೀದಿಯ ಉದ್ಘಾಟನಾ ಸಂದರ್ಭದಲ್ಲಿ ಒಂದು ವಿಶೇಷ ಸಮಾರಂಭವನ್ನು ಆಯೋಜಿಸಲಾಗಿತ್ತು. ಅದು ಮಸೀದಿಯ ಹೊರ ಭಾಗದಲ್ಲಿ ಪುರುಷರು ಮಹಿಳೆಯರಿಗೆ ಪ್ರತ್ಯೇಕ ಮಾರ್ಕ್ ಹಾಕಿಸಿ ಏರ್ಪಾಡು ಮಾಡಲಾಗಿತ್ತು.

ಇಂದಿನ ಸಮಾರಂಭವು ಪ್ರಾಮುಖ್ಯತೆ ಪಡೆಯಲು ಇನ್ನೊಂದು ಕಾರಣವೇನೆಂದರೆ 64 ವರ್ಷಗಳ ಹಿಂದೆ 1995 ರಲ್ಲಿ ಹಾಲೆಂಡಿನ ನೆಲದಲ್ಲಿ ಜಮಾಅತ್ತಿನ ಪ್ರಥಮ ಮಸೀದಿ "ಮಸ್ಜಿದ್ ಮುಬಾರಕ್" Den Haag ನಲ್ಲಿ ನಿರ್ಮಿಸಲಾಗಿತ್ತು. ಇಂದು ಈ ವರ್ಷದ ನಂತರ ಅಲ್ಮಿರೆ ನಗರದಲ್ಲೂ ಅಹ್ಮದಿಯಾ ಜಮಾಅತ್ ಹಾಲೆಂಡಿನ ಈ ಎರಡನೆಯ ಮಸೀದಿ ನಿರ್ಮಾಣವಾಗಿದೆ. ಮತ್ತು ಇಂದು ಅವರ ಉದ್ಘಾಟನಾ ಸಮಾರಂಭವಾಗಿದೆ.

ಹುಝೂರ್(ಅ.ಬಿ.ಅ.) ಆಗಮಿಸುವುದಕ್ಕಿಂತ ಮುಂಚಿತವಾಗಿ ಎಲ್ಲ ಅತಿಥಿಗಳು ಮಾರ್ಕಿನಲ್ಲಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಂಡಿದ್ದರು. ಈ ಸಮಾರಂಭದಲ್ಲಿ ಭಾಗವಹಿಸುವವರ ಅತಿಥಿಗಳ ಸಂಖ್ಯೆ 85 ರ ಸಮೀಪವಿತ್ತು. ಅದರಲ್ಲಿ ಅಲ್ಮಿರೆ ನಗರದ ಡೆಪ್ಯೂಟಿ ಮೇಯರ್ ವಿವಿಧ ಕ್ಷೇತ್ರಗಳ ಕೌನ್ಸಿಲರ್‌ಗಳು, ಸರಕಾರಿ ಸಂಸ್ಥೆಗಳ ಪ್ರತಿನಿಧಿಗಳು, ಪೋಲೀಸ್ ಮತ್ತು ಭದ್ರತಾ ಸಿಬ್ಬಂಧಿಗಳು, Chairman ಹಿಂದೂ ಸಮಿತಿ ಅರ್ಮಿರೆ, ಸಿಖ್ ಸಮುದಾಯದ ಮುಖಂಡರು, Jesish ಸಮುದಾಯದ ಪ್ರತಿನಿಧಿ, ವೈದ್ಯರು, ಉಪನ್ಯಾಸಕರು, ಶಿಕ್ಷಕರು, ವಕೀಲರು, ವರ್ತಕರು ಮಸೀದಿ ಬೈತುಲ್ ಆಫಿಅತ್ ಅಲ್ಮಿರೆಯ Artist ಮತ್ತು ಜೀವನದ ವಿವಿಧ ಸಭಾಗಳಿಗೆ ಸಂಬಂಧಿಸಿದ ಜನರು ಭಾಗವಹಿಸಿದ್ದರು.

ಕಾರ್ಯಕ್ರಮದನ್ವಯ 6 ಗಂಟೆ 10 ನಿಮಿಷಕ್ಕೆ ಹುಝೂರ್(ಅ.ಬಿ.ಅ.) ಮಾರ್ಕಿಗೆ ಆಗಮಿಸಿದರು. ಕಾರ್ಯಕ್ರಮದ ಪ್ರಾರಂಭವು ಖುರ್‌ಆನ್ ಪಠಣದಿಂದಾಯಿತು. ಅತಾವುಲ್ ಖಯ್ಯೂಮ್ ಆರಿಫ್ ಸಾಹಿಬ್ ಖುರ್‌ಆನ್ ಪಠಿಸಿದರು. ಮತ್ತು ಅದರ ಇಂಗ್ಲೀಷ್ ಭಾಷಾಂತರ ಪ್ರಸ್ತುತಪಡಿಸಿದರು.

ಅನಂತರ ಸೋಸಿಯಲಿಸ್ಟ್ ಪಕ್ಷದ ಅಲ್ಮಿರೆ ಸಿಟಿ ಕೌನ್ಸಿಲಿನ ಸದಸ್ಯರದ Ton vander Berg ಅವರು. ತಮ್ಮ ಪ್ರಸ್ಥಾವನೆಯಲ್ಲಿ ಹೇಳಿದರು. ಮೊದಲಿಗೆ ನಾನು ಗೌರವಾನ್ವಿತ ಶಾಂತಿಧೂತ ಖಲೀಫರನ್ನು ಹಾಲೆಂಡಿನ ಎಲ್ಲಾಜನತೆಯ ಪರವಾಗಿ ಸುಂದರವಾದ ಈ ನಗರಕ್ಕೆ ಸ್ವಾಗತ ಕೋರುತ್ತೇನೆ. ನಮ್ಮ ಪಕ್ಷದ ವತಿಯಿಂದಲೂ ತಮ್ಮ ಜಮಾಅತಿನ ಎಲ್ಲಾ ಜನರಿಗೂ ಸ್ವಾಗತ ಕೋರುತ್ತೇನೆ. ಅವರು ಈ ದೇಶದ ವಿವಿಧ ನಗರಗಳಿಂದ ಹಾಗೂ ಇತರ ದೇಶಗಳಿಂದಲೂ ಇಲ್ಲಿ ಬಂದು ಸೇರಿದ್ದಾರೆ. ಇಲ್ಲಿ ಉಪಸ್ಥಿತರಿರುವ ನಮ್ಮ ಸಂಗಡಿಗರಿಗೂ ಸ್ವಾಗತ ಬಯಸುತ್ತೇನೆ. ನನ್ನ ತಿಳುವಳಿಕೆ ಪ್ರಕಾರ ಇಮಾಮ್ ಜಮಾಅತ್ ಅಹ್ಮದಿಯಾ ಅವರ ಈ ಆಗಮನವು ಎರಡನೆಯ ಸಲದ್ದಾಗಿದೆ. ಮೊದಲ ಸಲ ಅಕ್ಟೋಬರ್ 2015 ರಂದು ಆಗಮಿಸಿದ್ದರು. ಆಗ ಅವರು ಈ ಮಸೀದಿಗೆ ಅಡಿಪಾಯ ಹಾಕಿದ್ದರು. ನಾನು ಹುಝೂರ್(ಅ.ಬಿ.ಅ.) ರವರು ಈ ನಗರದ ಒಂದು ಸುಂದರವಾದ ಕಟ್ಟಡ ಹೆಚ್ಚಿಸಿದಕ್ಕೆ ಶುಭಾಶಯಗಳನ್ನು ಅರ್ಪಿಸುತ್ತೇನೆ. ಅದಾದ್ಯೂ ಅಹ್ಮದಿಯರು ಮುಸ್ಲಿಮ್ ರಾಷ್ಟ್ರಗಳಲ್ಲಿ ಬಹಳಷ್ಟು ಕಷ್ಟ ನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅವರು ಶಾಂತಿ ಪ್ರಿಯರು ಮತ್ತು ಕಾನೂನು ಪಾಲನೆ ಮಾಡುವವರಾಗಿದ್ದಾರೆ. ಅದಾಗ್ಯೂ ನೀವು ನಿಮ್ಮ ಧ್ಯೇಯವಾಕ್ಯ "ಪ್ರೀತಿ ಎಲ್ಲರಿಗೂ ದ್ವೇಷವಿಲ್ಲ ಯಾರಲ್ಲೂ" ಮೂಲಕ ಅಂತಿಮವಾಗಿ ಈ ಲೋಕದಿಂದ ದ್ವೇಷ ಹಾಗೂ ಹಗೆತನ ಅಂತ್ಯಗೊಳಿಸುವವರಾಗುವಿರಿ.

ಹುಝೂರ್(ಅ.ಬಿ.ಅ.) ರು ಇಲ್ಲಿ ಆಗಮಿಸುವುದಕ್ಕಾಗಿ ಮಗದೊಮ್ಮೆ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಹಾಲೆಂಡಿನ ಈ ನಿಮ್ಮ ಪ್ರವಾಸವು ಸುಖಕರವಾಗಲಿ ಎಂದು ಆಶಿಸುತ್ತೇನೆ.

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.